# कर्नाटकसंस्कृतविश्वविद्यालयः

## द्वितीयदीक्षान्तघटिकोत्सवः

१४.०६.२०१३
ज्ञानज्योतिसभाङ्गणम्, बेङ्गलूरु

# दीक्षान्तभाषणम्


**डा. रामचन्द्र जि. भट्ट कोटेमने**
कुलपतिः S-VYASA विश्वविद्यालयः, प्रशान्तिकुटीरम्
गुरुकुलाचार्यः, वेदविज्ञानगुरुकुलम्, बेङ्गलूरु

# घटिकासङ्घटनार्थं घटिकोत्सवः

विजयनामसंवत्सरस्य घटिकोत्सवसन्दर्भे वयमत्र समवेताः । कर्नाटकसंस्कृतविश्वविद्यालयपरतः संस्कृतलोकार्थं नूतनाः पदवीधराः प्रस्तूयन्ते समाजाय समर्प्यन्ते च । संस्कृतस्य विजययात्रायां चत्वारि पदचिह्नानि, तद्यथा अधीतिः, बोधः, आचरणं, प्रचारणमिति । ज्ञानाराधकाः सारस्वतसुपुत्राः यत्र अध्ययनतः बोधं तदनुसारम् आचरणं तत्परिणामतः च प्रचारणं सङ्घटयन्ति, तत्र घटिकास्थानं स्वस्वरूपमश्नुते इति प्राञ्चः प्राहुः ।

विश्वमिदं ज्ञानाध्यायस्य नूतनोपक्रमघटत्यां चङ्क्रमते । ज्ञानाधिष्ठितसमाजः अस्माकं चक्षुषः समक्षे अस्ति । विद्या अधुना विशिष्टस्थाने विशिष्टमाने च विराजते । तन्त्रज्ञानचमत्कारवशात् विश्वमिदं नीडायते । पौर्वात्य-पाश्चात्यविद्याः प्रेयसः मार्गे परस्परं सहकुर्वन्ति । आत्मविज्ञानं विज्ञानपीठे श्रैष्ठ्यं भजते । आत्मविज्ञानेन भौतविज्ञानं पुष्टिमाप्नोति । सीमामतिलङ्घ्य विश्वस्मिन् विभ्राजते । नाना देशेषु संस्कृतसङ्गोष्ठ्यः आयोज्यन्ते । श्रीमद्भगवद्गीता नेतृत्वस्य कर्तृत्वस्य पथप्रदर्शकाकरत्वेन आद्रियते । जगति भारतमतिलङ्घ्य विविधदेशीयविश्वविद्यालयेषु नाना नाम्ना संस्कृतं पठ्यते ।

मनोविज्ञानं, भाषाविज्ञानं, निर्वहणविज्ञानम् इत्यादि ज्ञानशाखाः संस्कृतानुप्राणिताः । स्वास्थ्यविज्ञाने योगः, भौतविज्ञाने वेदान्तः, रसायनविज्ञाने धातुशास्त्रम्, जीवविज्ञाने आयुर्विज्ञानम् इत्यादिरीत्या संस्कृतस्थं विज्ञानम्

आधुनिकविज्ञानस्य जीवातुभूतमास्ते । ज्ञानयुगस्य ज्ञानप्रामाण्यप्रतिष्ठापने बौद्ध-जैन-न्याय-वैशेषिक-साङ्ख्यादिभिः प्रयुक्तानि तर्कसूत्राणि प्रयुज्यन्ते । न्यायालये न्यायनिर्णयार्थं मीमांसादर्शनस्य न्यायाः न्यायवादिभिः प्रयुज्यन्ते ।

आधुनिकेऽपि काले तत्र तत्र तदा तदा मतपन्थीयकूपखननं हृदयसामरस्यं प्रतिबध्नाति । ऋग्वेदस्य ''सङ्गच्छध्वं'' सामरस्यसूत्रं मानवलोकं समन्वयमार्गे उन्नयति । ''शन्नो अस्तु द्विपदे । शं चतुष्पदे'' ''ऊर्ध्वं जिगातु भेषजम्'' इत्यादि सकलजीवराशेः कल्याणवाणी मानसमुन्नतीकरोति । इत्थं संस्कृतपरिमलः सामरस्यसुमनोमालां विमलीकरोति ।

## संस्कृतं संस्कृतेर्मूलम्

''न मे स्तेनो जनपदे न कदर्यो न मद्यपो नाऽनाहिताग्निर्नाविद्वान्न स्वैरी स्वैरिणी कुतः ?'' (छान्दोग्यम् ५.११.५) इति वाक्येनानेन ऋषीन् सम्बोध्य कैकेयजानपदप्रतिनिधिः अश्वपतिः स्वस्थसमाजस्य प्रारूपं प्रस्तौति । संस्कृत-संस्कृतेः सामाजिकस्वरूपस्य प्रकटीकरणस्य इदमुदाहरणम् ।

जानश्रुतिः राजा आत्मज्ञानिनः रैक्वस्य निकटं गच्छति । शकटवटविटपादिनिकटवर्ती एषः आत्मज्ञानी ''भवदीयगोधनगजधनवाजिधनरत्नधनैः न मे किञ्चन प्राप्तव्यम् अस्ति । एतत् सर्वं भवदीयमेवास्तु'' इति वदन् संस्कृतशिष्टसंस्कृत्युचितव्यवहारं दर्शयति ।

''अधीहि भगव इति होपससाद सनत्कुमारं नारदः ऋग्वेदं भगवोऽध्येमि मन्त्रविदेवास्मि नात्मवित् श्रुतं ह्येव मे भगवद्दृशेभ्यः तरति शोकमात्मविदिति सोऽहं भगवः शोचामि तं मा भगवान् शोकस्य पारं तारयत्विति तं होवाच'' अगणितविद्याप्रवीणोऽयं युवा आत्मदर्शनतः शोकस्य पारं तर्तुमीहते इति प्रश्रयभावस्य उदात्तमुदाहरणम् ।

ज्ञानकुम्भः ऋषिः पिप्पलादः ''यदि विज्ञास्यामः सर्वं ह वो वक्ष्याम'' इति वदन् ''भवन्ति नम्राः तरवः फलोद्गमैः'' इति न्यायं स्वव्यवहारतः प्रस्तौति ।



समस्तसृष्टिपाठशालातः जीवजन्तुभ्यः अपि पाठं पठन् ''ब्रह्मविदिव वै सोम्य भासि'' इति गुरुणा अनुगृहीतः नित्यं नूतनप्रयोगशीलः सत्यकामः जाबालः संस्कृत-संस्कृतेः युव-प्रतिनिधिः ।

ऋतसत्यादीनां स्वाध्यायप्रवचनतः बोधं प्राप्य ''अहं वृक्षस्य रेरिव..... ऊर्ध्वपवित्रः वाजिनीव ..........'' इति आत्मनः कृतकृत्यतां प्रख्यापयन् सूर्यशक्तिप्रभावात् उत्तमाङ्गम् उत्तमाङ्गीकुर्वन् भौतिकं द्रविणम्, आत्मिकं वर्चः च सम्पाद्य अमृतोक्षितोऽस्मि इति पञ्चकोशविवेकी युवा त्रिशङ्कुः, 'अहं विश्वं भुवनमभ्यभवाम्' इति आत्मनः सर्वात्मभावं ख्यापयन् वारुणेयः भृगुः संस्कृत-संस्कृतेः प्रतिनिधिः भवति ।

पितुः शान्तमनस्त्वं कामयमानः गुणवान् पुत्रः नचिकेताः । महामनसम्, अनूचानमानिनम्, स्तब्धम्, श्वेतकेतुं तत्त्वमसि इति महावाक्यतः आत्मबोधेन पुत्रं पावयन् पितृत्वस्य उदात्तपङ्क्तिः आरुणिः, उदात्त-उपदेष्टा याज्ञवल्क्यः, मैत्रेयी, गार्गी, विश्ववारा इत्यादिब्रह्मवादिन्यः संस्कृत-संस्कृतेः वाहकाः/ वाहिकाश्च ।

पुत्र ! चन्द्रवंशस्य भोगभाग्यं भोक्तुमर्हति भवान् । किमर्थं सरस्वती-सिन्धु-गङ्गा-यमुना नदीनां तीरेषु सञ्चरन् श्रान्तोऽसि । आयाहि, कुरुराजगृहे उषित्वा अपनय श्रान्तिम् इति वात्सल्यमयी माता सत्यवती कृष्णद्वैपायनम् आह्वयति । मातः! नेदं रोचते मे । शतशः वेदशाखाः सरस्वत्याः तीरे लुप्ताः बभूवुः अनध्ययनवशात् । अवशिष्टाः ताः तेभ्यः ताभ्यः अहं सङ्गृह्णामि । सत्पात्रेभ्यः शिष्येभ्यः प्रदास्यामि । एतद् मदीयं कार्यम् इति वदन् कलि-द्वापरसन्धिकाले यः वेदान् विव्यास सः वेदव्यासः संस्कृतसंस्कृतेः उद्दात्तपपङ्क्तिः ।

समाजः इदानीमपि संस्कृतज्ञेभ्यः वेदविद्भ्यश्च उदात्तसद्वृत्तं निरीक्षते । १९-२० शताब्दे अपि कर्नाटक-इतिहासं समीक्षामहे चेत् स्वग्रामेषु उषित्वा

स्ववेदशाखां रक्षितवन्तः, शास्त्रपाठान् कृत्वा छात्रान् सज्जीकृतवन्तः ये विद्वांसः तेषां श्रेणी एव सम्मुखीभवति । हैदराबाद्कर्नाटके, उत्तरकर्नाटके यदि वयं मण्डलशः उपमण्डलशः च समीक्षां कुर्मः ग्रामं ग्रामं, नगरं नगरम् आशुकवयः, अन्तर्वाणयः, वेदज्ञाः, समुपलभ्यन्ते स्म । मैसूरुराजानां संस्कृताभिमानकारणतः अगणितविद्वन्मणयः कर्नाटकस्य दक्षिणभागे प्रादुर्भूताः । विविधसम्प्रदायस्थमठमन्दिराणाम् आश्रये अपि उच्चकोटिविद्वांसः कर्नाटकभूमिं भूषयामासुः । सर्व एते वैयासिकपरम्पराप्रवर्तकाः । अस्मिन्नपि शताब्दे आकाङ्क्षा एषा अस्माभिः पूरणीया ।

## संस्कृतमेव विश्वविद्या

'अध्यात्मविद्या विद्यानाम्' इति गीतावचनानुसारं मानसग्रन्थितः विमोचयित्री आत्मविद्या एव सर्वविद्याशिखरभूता । 'अधुनिकता' इति नाम्ना अहितकरस्पर्धा अपायकर-उपायाः सम्पदः सङ्ग्रहणार्थं प्रयुज्यन्ते लोके । जीवनस्य सकलक्षेत्रेषु दुरवस्था एषा दृश्यते । संस्कृतज्ञाः सामाजिक-स्वास्थ्यार्थम् अस्यां दिशि किमपि कुर्युः । ते तु आत्मविद्यानिकटस्थाः प्रेयसः श्रेयसश्च समावस्थां तत्त्वतो जानन्ति । व्यवहारतश्च यदि उदात्तपरूिपेण दर्शयन्ति समाजः उपकृतो भवति । परलोकवादो वा पलायनवादो वा न ऋषिसंस्कृतिसम्मतः । ''जीवेम शरदः शतम्'' इत्येव ऋषीणां वचः । किन्तु वैदिकानुष्ठाननाम्ना वेदविक्रयणम्, ज्ञानवाणिज्यम्, राजसेवादुरन्धरत्वम् इत्यादयः संस्कृतलोकस्य दोषाः शीघ्रं परिमार्जनीयाः । सिंहासनारूढानां कैङ्कर्यम्, तत्प्रशंसार्थं विद्वत्तायाः कवित्वस्य च उपयोगः इत्यादि मध्ययुगीनविद्वन्मानसिकतायाः जाड्यं न समलङ्करोति संस्कृतसंस्कृतिम् । प्रजाप्रभुत्वस्य मौल्यात् दूरापेतमिदम् । नानुमनुते वृत्तमिदम् व्यासपरम्परा ।

शिष्टाचाररहितप्रदर्शनात्मकपौरोहित्यम्, सिद्धिरहितप्रसिद्धिपरता,



मतपन्थीयश्रद्धाजाड्यम् इत्यादिकं संस्कृतदार्शनिकपरम्परातः नितान्तं विप्रकृष्टस्थानीयम् । संस्कृतसारस्वतविद्वल्लोकः विद्वत्तया, नीतिमत्तया, क्षमतया च समाजमण्डितः । सन्धिकालेऽस्मिन्नपि वयं स्थितिमेनां पालयितुं प्रयतामहे । कर्नाटकसंस्कृतविश्वविद्यालयः तदर्थं सुन्दरवेदिकारूपेण विभ्राजताम् ।

## संस्कृतं जीवनधारायाः अक्षुण्णं स्रोतः

**योगो ज्ञानं तथा साङ्ख्यं विद्याः शिल्पादिकर्म च ।**
**वेदाः शास्त्राणि विज्ञानं एतत् सर्वं जनार्दनात् ।।**

**– विष्णुसहस्रनामस्तोत्रम्**

**चतुर्वेदाः पुराणानि सर्वोपनिषदस्तथा ।**
**रामायणं भारतं च गीताः सद्दर्शनानि च ।।**
**जैनागमाः त्रिपिटकाः गुरुग्रन्थः सतां गिरः।**
**एष ज्ञाननिधिः श्रेष्ठः श्रद्धेयो हृदि सर्वदा ।।**

**– प्रो. श्रीधर भास्कर वेर्णेकर्**

''स होवाच ऋग्वेदं भगवोऽध्येमि यजुर्वेदं सामवेदमथर्वणं चतुर्थम् इतिहासपुराणं पञ्चमं वेदानां वेदं पित्र्यं राशिं दैवं निधिं वाकोवाक्यमेकायनं देवविद्यां ब्रह्मविद्यां भूतविद्यां क्षत्रविद्यां नक्षत्रविद्यां सर्पदेवजनविद्यामेतद्भगवोऽध्येमि ।।''

– छान्दोग्योपनिषत् ७।१।२

उपरि निर्दिष्टाः एते आकराः भारतीयप्राचीनज्ञान-विज्ञान-तन्त्रज्ञानस्य परिचायकाः भवन्ति । जीवनविज्ञानस्य विविधशाखाः एताः । जीवनस्य यशस्वितायै उपयुक्ताः विद्याः । संस्कृतस्य अयमेव विशालः प्रपञ्चः । संस्कृतवाङ्मयस्य चतुरस्रे इदमेव त्रिकम् । साहित्यस्य विविधप्रकाराः चमत्काराश्च चतुरस्रस्य एकांशभूताः ।

| | |
|---|---|
| **वेदविज्ञानम्** | **वेदविज्ञानम्** |
| **वेदविज्ञानम्** | **साहित्यम्** |

भारतदेशस्य यस्यकस्यापि राज्यस्य पदवीधरः कश्चन सागरोत्तरयात्रायां प्रायेण निम्मलिखितान् प्रश्नान् सम्मुखीकरोति ।

**१. भवतां देशतः विज्ञानलोकं प्रति किं योगदानम्?**

**२. किं भवन्तः योगं जानन्ति ?**

**३. भगवद्गीता किञ्चिदधीता किम् ?**

**४. बहुकालं दम्पतयः कथं सामरस्येन जीवन्ति भवतां देशे?**

**५. किमर्थं भवताम् आहारपद्धतिः मानवीयप्रकृत्यनुगुणा अस्ति? इत्यादि?..**

अहं स्वयम् एतान् प्रश्नान् सम्मुखीकृतवान् विदेशप्रवासे । अत्र समवेताः विद्वांसः भवन्तः युक्तमुत्तरं दातुं समर्थाः ।

संस्कृतविदां समवाये तद्भिन्नानां च मनस्सु संस्कृतस्य विषये विविधान्यथाभावाः सन्ति । संस्कृतज्ञाः केचन संस्कृतं केवलं कान्तासम्मितम् इति मन्यमानाः रसिकश्लोकेषु, चाटुश्लोकेषु रमन्ते । प्रभुसम्मितवेदतः मित्रसम्मितवाङ्मयतश्च दूरे कुत्रचित् विरमन्ति । सुविदितमिदं यत् साहित्यस्य नानाप्रकारेषु कन्नडसदृशराज्यभाषाः नितान्तं संमृद्धाः । शब्दालङ्कारे, अर्थालङ्कारे महनीयमहिताः एताः । तथैव युरोपीयभाषाः गद्यपद्यनाटकादिषु विविधजानपदसाहित्यप्रकारेषु च सुविख्याताः सन्ति । प्रकारेऽस्मिन् संस्कृतं स्वमहिम्नः ख्यापनं किमर्थं कुर्यात् ? संस्कृतस्य प्रधानक्षेत्रं प्रज्ञानं, विज्ञानं, तन्त्रज्ञानं प्रकृतिप्रेमिजीवनम् इत्यादि।

अधोनिर्दिष्टाः शाखाः विज्ञानस्य नितान्तं संमृद्धाः संस्कृते ।

| | |
|---|---|
| १. आत्मविज्ञानम् | २. निर्वहणविज्ञानम् |
| ३. भौतविज्ञानम् | ४. वाग्विज्ञानम् |
| ५. विकासविज्ञानम् | ६. मनोविज्ञानम् |



| | |
|---|---|
| ७. प्रमाणविज्ञानम् | ८. परिसरविज्ञानम् |
| ९. जीवविज्ञानम् | १०. सूर्यरश्मिविज्ञानम् |

सूत्ररूपेण उल्लेखिताः वेदविज्ञानस्य शाखाः इमाः । समग्रे जगति शतशः विश्वविद्यालयेषु उपरिनिर्दिष्टासु वेदविज्ञानशाखासु संशोधनकर्तारः प्रबन्धलेखनसमये आर्षेयाणि वेद-वेदाङ्गान्येव आश्रयन्ते । पञ्जाबप्रान्तीयः युवा, गुजरातप्रान्तीया युवतिः, द्राविडः, कन्नडभाषीयः? सर्वेऽपि ज्ञानविज्ञानशाखासु भारतीययोगदानं प्रस्तोतुम् इच्छवः गैर्वाणं स्रोतः एव समाश्रयेयुः । सन्तप्तं समाजमिमं विघटितं च घटयितुं सामरस्यसूत्रं संस्कृतस्य गृह्यसूत्रेभ्यः साधुकाव्येभ्यश्च सङ्ग्राह्यमधुना ।

संस्कृतस्य अभिजातकृतिषु याथार्थ्येन आहार-विहार-व्यवहार-विचारयोग एव नितान्तं निबद्ध इति सप्रमाणं साभिमानं उद्घोषयितुं कालोऽयं संन्निहितः ।

भारतीयदार्शनिक-योगानुष्ठान-तान्त्रिकसाधनापरम्परासु यदा अधिकसंशोधनम् ऐतिहासिकघट्टे संवृत्तं तदानीम् अस्मिन् देशे कन्याकुमारीतः हिमनगपर्यन्तमपि विचारमाध्यमभाषा संस्कृतमेवासीत् इति तु सन्देहसन्दोहातीतम् । पाकविज्ञानतः आरभ्य पीलुविज्ञानपर्यन्तमपि उन्नतस्तरीयशास्त्राध्ययनं संस्कृतमाध्यमेन चलति स्म ।

एतत्पृष्ठभूमौ संस्कृतस्य कालौचित्यविषये संस्कृतव्यवहारविषये संस्कृततः दूरे विद्यमानाः चिन्तकाः पुनः परिशीलयन्तु । तथ्यं दृष्टिपथम् आयात्येवेति न पुनर्वक्तव्यम् ।

विश्ववेदिकायां वत्सराणां सहस्रतः विराजमाना रुचिरगभीरा भारतभूषा संस्कृतभाषा पुनः तत्स्थानापन्ना भवेत्। जनेषु भ्रष्टाचारः, युवक-युवतिषु उच्छृङ्खलता, सामाजिकधार्मिकराजकीयनेतृत्वे अविश्वसनीयता इति

भारतीयसमाजस्य आधिव्याधिसरणिरियम् । रोगस्यास्य परिहार: संस्कृतलोकत: भवितुमर्हति योगचिकित्साद्वारा यज्ञचिकित्साद्वारा च ।

सामान्यजना: संस्कृतत: योगं, वेदान्तं, प्रकृतिप्रेमिजीवनं, भावोदात्ततासाधकं सङ्गीतं, जगद्व्यन्द्यकुटुम्बसंस्कृतिं, सकलकालोपयोगि-आश्रमधर्मं च निशम्य निशाम्य च उपकृता: भवन्ति । संस्कृतज्ञा: एतत्पात्रं निर्वहेयु: येन च संस्कृतं कालोचितं भवति ।

Arnold Toynbee इति प्रथितनामा इतिहासज्ञ: भारतीयाध्यात्मतसूत्रत: वैज्ञानिकजगत्प्रति भारतीय-औन्मुख्यं (Indian Turn) देयम् इति उद्घोषयामास । एतत्सूत्रस्य मूलं देशस्यास्य शिष्टाचारपरम्परायामस्तीति विश्वस्मिन् शिष्टा: आमनन्ति ।

## नवोत्थानार्थं संस्कृतनवनीतम्

स्वामिविवेकानन्दस्य वेदान्तडिण्डिमनाद: भूमण्डले सर्वत्र श्रूयते । ''नृणाम् एको गम्य: त्वमसि पयसाम् अर्णव इव'' इति शिवमहिम्न: स्तोत्रस्य सामरस्यसूत्रम् उद्धृत्य विश्वमानवकोटिम् आरुरोह । ''अमृतस्य पुत्रा:'' इति ऋग्वेदीयं ध्येयवाक्यमेव मन्त्रत्वेन उपयुज्य पाश्चात्यानां मन: जित्वा भारतीयजीवनधारां प्रति अनेकान् आचकर्ष। नवोत्थानाध्यायस्य स एव प्रवर्तक: । तेन प्रदत्त: राजयोग-ज्ञानयोग-भक्तियोग-कर्मयोगसन्देश: मानवम् उद्धारमार्गे उन्नयति । संस्कृतविद्वांस: वैदिका: आगमिका: सर्वेऽपि वयं प्रथमं जीवनयोगिन: भवेम । आचारविचारसामरस्यवन्त: जना: इदानीमपि आद्रियन्ते समाजे । विवेकानन्दस्य शैक्षणिकविचारधारा जगद्वन्द्या चकास्ते । श्रद्धा ब्रह्मचर्यं गुरुकुलवास: इति तेन प्रदत्तानि शिक्षणसूत्राणि । 'सूत्रै: एतै: प्रेरिता: शतं युवान: बद्धकटयो भवन्तु राष्ट्रार्थम् । समाजसङ्क्रान्तिमहं विधास्ये' इति जगर्ज । तादृशा: युवान: समुत्थिष्ठन्तु नानाक्षेत्रेभ्य: Engineering,



Medical, M.B.A, I.A.S, I.P.S, NET, SLET, इत्यादि मूलत: आगच्छन्तु । अपेक्षितगुणसम्पन्ना: युवका: युवत्यश्च सर्वस्य प्रथमं संस्कृतपाठशालाभ्य: आयान्तु । योग-वेद-संस्कृतशब्दशब्दितविश्वविद्यालयेभ्य: आयान्तु । इत्थं विवेकानन्दस्य सार्धैकशताब्दाचरणं सार्थकं तस्यात्मन: शान्तिसन्धायकं च भवतु इति वयं मिलित्वा प्रार्थयाम: ।

भारतीयजीवनधारायाम् अर्थकामयो: हितं मितं च स्थानमस्ति । धर्ममोक्षकूलयो: अन्तराले अर्थकामयो: अनवरुद्धप्रवाह: शास्त्रसम्मत: Fritjof Copra इति विज्ञानी पूर्वदेशिकसांस्कृतिकपरम्परां बहुमन्यमान: तस्या: अधुनिकौचित्यं सोपपत्ति निरूपयति । चैना जपान् इत्यादि पौर्वात्यराष्ट्रेषु योगमाध्यमेन भारतीयसंस्कृति: प्रवहति । व्यापारवाणिज्यानुधावनप्रवणतायामपि संस्कृते: स्रोत: रक्षणीयमिति बहव: आशेरते । ''भूमौ स्खलितपादानां भूमिरेवावलम्बनम्'' इति न्यायेन कीदृशी वा विद्युन्मानप्राद्यौगिकपराकाष्ठा भूमिम् अवतरेत् । संस्कृते: स्थानं अक्षुण्णमवतिष्ठत एव।

## संस्कृतस्य नैजपरिचय:

वयम् अक्षरयुगे स्म: । एतस्य नामान्तरं पुस्तकयुगमिति । मस्तकस्था: विचारा: लिपिमाध्यमेन सुचारु प्रकटीक्रियन्ते पुस्तकेषु । अनेन विधानेन अल्पकालस्थायि क्षरभूतं वस्तु चिरस्थायि भूत्वा अक्षरतां प्रतिपद्यते । तन्त्रविज्ञानस्य चमत्कारोऽयम् ।

किन्तु पञ्चभ्य: सहस्रेभ्य: वर्षेभ्य: प्राक् संस्कृतवाङ्मयस्य ऋतम्भराप्रज्ञया य: आविष्कार: ग्रामं ग्रामं, गृहं गृहं सम्बभूव स एव वाङ्मय: वेदवेदाङ्गात्मक: संस्कृतवाङ्मयस्य उदात्त: कालातीत: प्रकार: । भारतीयज्ञानस्य मूलं तदेव । स: काल: श्रुतियुगम् इति नाम्ना आख्यातुं शक्यते । आधुनिकयुगस्य प्रसिद्धं पदं Out of Box Thinking इति । परिचितप्राकारम् अतिलङ्घ्य

चिन्तयेत् इति पदपुञ्जस्यास्य भावः । वयं संस्कृतज्ञाः तथैव किञ्चित् चिन्तयामः ।

लिपेराविर्भावः तस्मिन् कालघट्टे अभूत् यदा मानवमस्तिष्कशक्तिः क्षीणताम् इयाय । रेखोपरेखाणां कल्पितविन्यास एव लिपिः । शब्दस्य वा ध्वनेर्वा याथार्थ्येन अभिव्यञ्जनशक्तिः कथं वा स्यात् रेखाणां वा उपरेखाणां वा । किन्तु कालप्रवाहस्य एकस्मिन् अध्याये सारस्वतलोकं प्रविष्टा इयं लिपिः श्रुतिसंस्कृतिमेव पश्चान्निनाय । यथालिखितपाठकत्वं संस्कृतपरम्परायां दोषाय इत्युक्ते आधुनिकाः उपहसेयुः । किन्तु संस्कृतस्य संस्कृतत्वम् ऋतम्भरीयमस्तिष्कशक्तौ चकास्ति ।

एतत्पृष्ठभूमौ संस्कृतज्ञानां परम्परा नाम नादानुसन्धानयोगिनां परम्परा इत्येव भावनीयम् । तथ्यमेतत् किमिदानीमपि वयं संस्मरामः । श्रुतिपक्षं च रक्षामः । महाभारतकालोत्तरं वत्सराणां पञ्चसहस्रात्मकः संस्कृतवाङ्मयकालः अत्यन्तं लघीयान् । महांश्च कालः तत्पूर्वम् । आस्ताम्, वयमत्र बहुदूरं समायाताः । रिक्ब्रिग्स्नामा (Rig bricks) सङ्गणकतज्ञः संस्कृतभाषायाः वैज्ञानिकतां समीक्ष्य एकस्याः भाषायाः साहाय्येन अनेकासु भाषासु अनुवादसौलभ्यम् (Machine Translation) आनेतुं तादृशकृत्रिममस्तिष्कं (Software) निर्मातुं संस्कृतज्ञान् आजुहाव । उपक्रान्तं तत्कार्यम् इदानीमपि सामिकृतं यूनः विदुषः अपेक्षते कार्यपूर्णतासिध्यै । कर्नाटकसंस्कृत-विश्वविद्यालयतः कार्यमेतत् पूर्णतां यातु इति प्रार्थयामः। संस्कृतक्षेत्रे कर्नाटकराज्यम् अनेकानि अपूर्वाणि साधयामास ।

१. **१९१७ तमे वर्षे वासिष्ठगणपतिमुनेः अन्तेवासी देवरातः ऋक्छन्दांसि आविश्चकार।**

२. **सुधर्मा, अपूर्वसंस्कृतदिनपत्रिका कर्नाटकतः एव प्रसुषुवे ।**



३. **संस्कृतसम्भाषणान्दोलनस्य शुभारम्भः अत्रैव समभूत् ।**

एतत्सरणौ नूतनाः उपक्रमाः आरब्धव्याः ।

## कालोऽयं सन्निहितः सङ्कलनार्थम्

जीवविज्ञानीयगवेषणं विश्वस्य विविधप्रदेशे विद्यमानाः सर्वविधमानवाः एकस्य एव जीवकोशस्य मूलतः प्रादुर्भूताः इति प्रमाणयति । उत्खननशास्त्रतः इदम् आविष्कृतं यत् गङ्गा-यमुना-सरस्वतीनदीनां तीरप्रदेशः 'सप्तसिन्धु' नाम्ना समलङ्कृतः प्राचीनमानवस्य मूलम् । भाषाविज्ञानीयसंशोधनानुसारं साक्षात्कृतधर्मणः ऋषेः मूलमानवस्य माध्यमभाषा संस्कृतमेवासीत् इति ज्ञायते। गाथिक्, जर्मन् इत्यादि भाषासु संस्कृतपदच्छाया परिदृश्यते । अन्यत्र हिमगिरिगह्वरेषु जानपदभाषास्वपि संस्कृतप्रभावः संलक्ष्यते । इत्थं गुण-संस्कृति-संस्कारसंवलितप्रत्नभाषा स्वनूत्नतां ख्यापयन्ती विश्वमावृत्य तिष्ठति ।

भरतमुनिः भाषायाः नैकस्थितिं दर्शयति ।

**अतिभाषा तु देवानाम् आर्यभाषा तु भूभुजाम् ।**
**संस्कारगुणसंयुक्ता सम्यक्-न्यायप्रतिष्ठिता ।।**

**- भरतनाट्यशास्त्रम् १८।२**

भाषामुखतः, संस्कारमुखतः, अतिभाषामुखतश्च संस्कृतं स्वप्रभावं समाजे जनयेत् । विचारभावनानाम् आदानप्रदानसेतुभूता भाषा संवहनसामर्थ्येन जनानाम् आस्ये नरीनृत्येत । तदर्थं संस्कृतमाध्यमेन पाठाः सरलसंस्कृत-प्रचारान्दोलनं तत्पूरकत्वेन Audio, Vedio उपकरणानां निर्माणं संस्कृतगृहाणां, संस्कृतग्रामाणां च सङ्ख्यावर्धनार्थं कार्ययोजनाः भवेयुः । ''मम गृहे संस्कृतेन सम्भाषन्ताम्'' इति फलकानि अमेरिकादेशेऽपि विलसन्ति । संस्कृतसन्ध्या, सम्भाषणसन्देशः इत्यादिनाम्ना व्यापककार्ययोजना इदानीम् आबालगोपालं समुल्लसतु ।

आर्यभाषा इत्युक्तौ कस्यचन जनसमुदायस्य भाषा इति नार्थः । यदा भाषायाः विविधाङ्गेषु वर्णे, स्वरे, मात्रायाम्, अन्तर्बाह्ययत्नेषु, संहिताक्षरेषु, अक्षरसन्तानेषु सुभगता सुष्ठुता समाहिता भवति तदा भाषा परिष्कृतस्वरूपं प्राप्य सम्यक् कृतं संस्कृतम् इति परिगण्यते । संस्कृतमिति सांज्ञिकं पदं न । संस्कारपरिष्कारसूचकं विशेषणपदं तत्। एतत्पृष्ठभूमौ कन्नडभाषा संस्कृतभाषैव संस्कारगुणयुक्तत्वात् । फ्रेञ्च्-जर्मन्-आङ्ग्लभाषाः अपि हेतुनानेन एतामेव स्थितिं प्रपन्नाः ।

संस्कृतस्य अनितरसाधारणशक्तिर्नाम सम्यक् न्यायप्रकाशितत्त्वम् । संस्कारस्य काष्ठान्ताधिष्ठितत्त्वम् ।एतादृशं संस्कृतं वेदमन्त्रेषु सम्यक् प्रकाशते । उदात्तादिस्वरव्यवस्थातः आनुपूर्वीसाद्गुण्यतः अतिभाषास्थितिः संहिता-ब्राह्मण-आरण्यक-उपनिषत्सु, पाणिनिबादरायणादिग्रथितसूत्रेषु, गौडपादादिरचितकारिकासु, भाष्येषु, वार्तिकेषु संस्कृतस्य गाङ्गं पयः परिलक्ष्यते । अर्थतः संज्ञानम्, विज्ञानम्, आज्ञानम्, प्रज्ञानम् अन्तर्निहितमास्ते। अस्य वाङ्मयप्रकारस्य गोप्तारः पाठकाः संशोधकाः विरलविरलाः दृश्यन्ते समस्तसंस्कृताध्ययनकेन्द्रजाले । कामं तत्र तत्र संस्कृतभाषिणः, काव्यप्रणेतारः, पदवीसम्पन्नाः, शिक्षाशास्त्रिणः, प्रथमतृतीयभाषापाठकाः निर्मीयन्ते । संस्कृतस्य अयं पक्षः संमृद्धो भवतु ।

केषुचिदेव वत्सरेषु संस्कृतलोके श्रेष्ठानाम् अन्तर्वाणिनाम्, वेदज्ञानाम् क्षामस्थितिः (अकालस्थितिः) गोचरीभविष्यति । वेदमधीत्य एकत्र कालोचितप्रयोगनिष्ठाः संहितापाठं, विकृतिपाठं च विस्मरन्ति । वेदभाष्यस्य अध्ययनन्तु दूरे एव । वेदान्त-न्याय-मीमांसा-व्याकरणविद्वांसः तत्तच्छात्रमधीत्य माध्यमिकशालाशिक्षकत्वेन कृतकृत्यताम् अश्नुवन्तः शास्त्रं विस्मरन्ति । ज्यौतिष-धर्मशास्त्र-शिक्षा-कल्प-निरुक्त-छन्दसाम् अध्ययनं तु पूरकपाठप्रकोष्ठान्तर्गतं (Part time) विलीनतां याति । योग-आयुर्वेद-



गन्धर्ववेद-वाङ्मयप्रकाराः मूलग्रन्थाध्ययनप्रणाल्या दूरं याताः । तल्लोके अनुवादानुचरणं केवलं भवति ।

संस्कृतस्य वार्तमानिकदशायाः परिष्कारार्थम् आन्दोलनानि भवन्तु । Inter Disciplinary अन्तर्विषयसंशोधनार्थं युवानः युवत्यः सम्प्रेर्यन्ताम् । MSc, BCom, MCom, BE, इत्यादिपदवीसम्पन्नाः संस्कृताकराणां आलोडनं कृत्वा शोधप्रबन्धान् प्रकाशयन्तु । प्राचीनलिपिशास्त्राध्ययनपूर्वकम् अप्रकटिततालपत्रानाम् अध्ययनार्थं तत्रस्थज्ञानरश्मिप्रसारार्थं बद्धकटयो भवन्तु छात्राः । सङ्गणकतन्त्रज्ञानोपयोगपुरःसरम् Ancient Roots + Modern Fruits सुन्दरसमागमार्थं सन्नद्धाः भवन्तु। दीर्घकाल-नैरन्तर्य-सत्कारगुणगणान्विताः छात्राः नित्यसाधकाः भवन्तु । वेदान्त-न्याय-मीमांसा-व्याकरणादिशास्त्रेषु उद्ग्रन्थाध्ययनार्थं प्रगतशास्त्राध्ययनकेन्द्राणि (Post-Doctoral Study Centre) आकारं प्राप्नुयुः ।

पदवीसम्पन्नाः विद्वांसः विदुष्यश्च स्वाधीतविद्यां वितीर्य समाजे मान्यतां धन्यतां च प्राप्नुवन्तु । संस्कृतस्य सर्वे समाराधकाः वैरुध्यं वैषम्यं च दूरमपसार्य ऋषिपरम्परायाः महतः वटस्य निकटे भावतः ध्येयतः कार्यशैलीतश्च परस्परं समवेताः सौहार्दं स्वान्तःकरणेषु समावाह्य समेधन्तां शोभन्तां च इति सम्प्रार्थ्य परमात्मनः पदतलं वाक्कुसुमैः समभ्यर्च्य विरमामि ।

**।। ओं तत्सत् ।।**

# ಘಟಿಕಾಸ್ಥಾನಕ್ಕಾಗಿ ಘಟಿಕೋತ್ಸವ

**ಡಾ. ರಾಮಚಂದ್ರ ಜಿ. ಭಟ್ ಕೋಟೆಮನೆ**

ವಿಜಯ ನಾಮ ಸಂವತ್ಸರದ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ದ್ವಿತೀಯ ಘಟಿಕೋತ್ಸವದ ಸನ್ನಿವೇಶದಲ್ಲಿ ನಾವೆಲ್ಲ ಇಲ್ಲಿ ಒಟ್ಟಿಗೆ ಸೇರಿದ್ದೇವೆ. ಈ ಸನ್ನಿವೇಶದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ನೂತನ ಸಂಸ್ಕೃತ ಪದವೀಧರರು ಸಮಾಜಕ್ಕೆ ಸಮರ್ಪಿಸಲ್ಪಡುತ್ತಿದ್ದಾರೆ. ಜ್ಞಾನಾರಾಧಕರು, ಸಾರಸ್ವತ ಸುಪುತ್ರರು, ಒಂದೆಡೆಗೆ ಕಲೆತಾಗ ಆ ಜಾಗವೇ ಘಟಿಕಾಸ್ಥಾನವಾಗುತ್ತದೆ. ಅಧ್ಯಯನದಿಂದ ಬೋಧ, ಬುದ್ಧರಾದವರಿಂದ ಆಚರಣೆ, ಆಚರಣೆಯ ಪರಿಣಾಮವಾಗಿ ಪ್ರಚಾರಣೆಗಳು ನಡೆಯುವಲ್ಲಿ ಘಟಿಕೆಯ ಘಟನಾವಳಿ ಸ್ವಯಂ ರೂಪ ತಾಳುತ್ತದೆ.

ವಿಶ್ವವಿಂದು ಜ್ಞಾನಾಧ್ಯಾಯದ ಹೊಸ ಅಂಚಿನಲ್ಲಿದೆ. ಜ್ಞಾನಾಧಾರಿತ ಸಮಾಜ ಇಂದು ವಿಶ್ವಚಿಂತಕರ ಕಣ್ಣಮುಂದಿನ ಧ್ಯೇಯವಾಗಿದೆ. ವಿಶ್ವದಲ್ಲಿ ಇಂದು ವಿದ್ಯೆಗೆ ನೀಡಲಾಗುವ ಸ್ಥಾನ ಮತ್ತು ಮಾನ ವಿಶಿಷ್ಟವಾದುದು. ಒಂದೆಡೆಗೆ ತಂತ್ರಜ್ಞಾನದ ಪವಾಡದಿಂದ ವಿಶ್ವವೊಂದು ವಿದ್ಯಾಗ್ರಾಮವಾಗಿದೆ. ಪೌರಾತ್ಯ ಮತ್ತು ಪಾಶ್ಚಾತ್ಯ ವಿದ್ಯೆಗಳು ಕೈಕುಲುಕುತ್ತಿವೆ. ಪ್ರಾಚೀನವಿಜ್ಞಾನ, ಆಧುನಿಕ ತಂತ್ರಜ್ಞಾನಗಳು ಒಟ್ಟಿಗೆ ಸಹ ಪಯಣವನ್ನು ನಡೆಸುತ್ತಿವೆ. Science of Consciousness ಆತ್ಮವಿಜ್ಞಾನ, ವಿಜ್ಞಾನಲೋಕದ ಹೊಸ ಆಯಾಮವಾಗಿ ಭೌತವಿಜ್ಞಾನಕ್ಕೆ ಮೆರಗನ್ನು ಕೊಡುತ್ತಿದೆ. ವಿಶ್ವಸ್ತರದಲ್ಲಿ ಮೂರು ವರ್ಷಕ್ಕೊಮ್ಮೆ ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಸಂಸ್ಕೃತಸಮ್ಮೇಳನಗಳು ಜರುಗಿ ನೂತನ ದೃಷ್ಟಿಯ ಸಂಶೋಧನೆಗಳ ಆದಾನ–ಪ್ರದಾನಗಳು ನಡೆಯುತ್ತಿವೆ. ವೇದಸಮ್ಮೇಳನಗಳು ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಜರುಗುತ್ತಿವೆ. ನಿರ್ವಹಣವಿಜ್ಞಾನ, ಭಾಷಾವಿಜ್ಞಾನ,

ಭೌತವಿಜ್ಞಾನ, ಮನೋವಿಜ್ಞಾನ ಮುಂತಾದ ವಿಷಯಗಳ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಗೋಷ್ಠಿಗಳಲ್ಲಿ ಉಪನಿಷತ್ತು ಮತ್ತು ಗೀತೆಗಳ ಉದ್ಧರಣೆ, ಉದಾಹರಣೆಗಳು ಸರ್ವತ್ರ ಕೇಳಿಬರುತ್ತಿವೆ.

ಶ್ರೀ ಮದ್ಭಗವದ್ಗೀತೆ ಇಂದು ಕರ್ತೃತ್ವ, ನೇತೃತ್ವ ನಿರ್ವಹಣಕೌಶಲಗಳ ಕೈಪಿಡಿ ಎನಿಸಿದೆ. ವೇದ-ವೇದಾಂಗಗಳು ಪ್ರಾಚೀನಜ್ಞಾನವಿಜ್ಞಾನಗಳ ಆಕರಗಳಾಗಿವೆ. ಪೃಥ್ವಿಯ ಮೇಲಿರುವ ಸುಮಾರು ೧೦೦ ಕ್ಕಿಂತ ಹೆಚ್ಚು ರಾಷ್ಟ್ರಗಳ ವಿಶ್ವವಿದ್ಯಾಲಯಗಳಲ್ಲಿ ನಾನಾ ಹೆಸರಿನಲ್ಲಿ ಸಂಸ್ಕೃತದ ಅಧ್ಯಯನ ನಡೆಯುತ್ತಿದೆ. ಅಮೇರಿಕದಂತಹ ದೇಶದಲ್ಲೂ ಸಹಸ್ರಾರು ಸಂಖ್ಯೆಯಲ್ಲಿ ಸ್ವಲ್ಪ ಸ್ವಲ್ಪ ನಿತ್ಯವ್ಯವಹಾರದಲ್ಲಿ ಸಂಸ್ಕೃತವನ್ನು ಬಳಸುತ್ತಿದ್ದಾರೆ.

ಸ್ವಾಸ್ಥ್ಯವಿಜ್ಞಾನಕ್ಕಿಂದು ಯೋಗ ಬೇಕು, ಭೌತವಿಜ್ಞಾನಕ್ಕಿಂದು ವೇದಾಂತ ಬೇಕು, ರಸಾಯನಶಾಸ್ತ್ರಕ್ಕಿಂದು ಭಾರತೀಯ ಧಾತುಶಾಸ್ತ್ರ ಬೇಕು, ಜೀವವಿಜ್ಞಾನಕ್ಕಿಂದು ಆಯುರ್ವಿಜ್ಞಾನ ಬೇಕಾಗಿವೆ. ಜ್ಞಾನಯುಗದ ಜ್ಞಾನದಲ್ಲಿ ಪ್ರಾಮಾಣ್ಯಪ್ರತಿಷ್ಠಾಪನೆ ಮಾಡಲು ಬೌದ್ಧ, ಜೈನ, ನ್ಯಾಯ, ವೈಶೇಷಿಕ, ಸಾಂಖ್ಯ ಮುಂತಾದವರು ಬಳಸುವ ತರ್ಕಸೂತ್ರಗಳು ಬೇಕು, ನ್ಯಾಯಾಲಯಗಳಲ್ಲಿ ನ್ಯಾಯದ ಸೂಕ್ತನಿರ್ಧಾರಕ್ಕೆ ಭಾರತೀಯ ಮೀಮಾಂಸಾ ದರ್ಶನ ಮತ್ತು ಧರ್ಮಶಾಸ್ತ್ರಗಳ ಮಾರ್ಗಸೂಚಿ ಬೇಕಲ್ಲವೆ? ಆಗಾಗ ವಿಶ್ವದಲ್ಲಿ ತಲೆಯೆತ್ತುವ ಮತಪಂಥಗಳ ಗೋಡೆಗಳನ್ನು ಬೀಳಿಸಲು ಋಗ್ವೇದದ "ಸಂಗಚ್ಛಧ್ವಂ" ಸಾಮರಸ್ಯಸೂತ್ರ ನಮಗಿಂದು ಬೇಕು. ಸಕಲಜೀವಲೋಕಕ್ಕೆ ಏಕೈಕ ಆಶ್ರಯತಾಣವಾದ ಭೂತಾಯಿಯನ್ನು ನಾಶದ ಅಂಚಿನಿಂದ ಸಂರಕ್ಷಿಸಲು, ಸಂವರ್ಧಿಸಲು "ಶಂನೋ ಅಸ್ತು ದ್ವಿಪದೇ, ಶಂ ಚತುಷ್ಪದೇ" "ಊರ್ಧ್ವಂ ಜಿಗಾತು ಭೇಷಜಮ್" ಎಂಬುದಾಗಿ ಎಲ್ಲ ವಿಧದ ಜೀವರಾಶಿಗಳಿಗೂ ಕಲ್ಯಾಣವನ್ನು ಹಂಬಲಿಸುವ ಋಷಿವಾಣಿಯಂತೂ ಬೇಕೇ ಬೇಕು. ಈ ಎಲ್ಲಾ ಬೇಕುಗಳ ಸರಮಾಲೆಗೆ ಸಂಸ್ಕೃತದ ಸುಗಂಧದ ಜೋಡಣೆಯಾಗಬೇಕಾಗಿದೆ ಅಷ್ಟೆ?

**ಸಂಸ್ಕೃತಿಗಾಗಿ ಸಂಸ್ಕೃತ**

"ಓ ಋಷಿಗಳೇ, ನನ್ನ ಜನಪದದಲ್ಲಿ ಕಳ್ಳರಿಲ್ಲ, ಮದ್ಯಪಾಯಿಗಳಿಲ್ಲ, ಅನಕ್ಷರಸ್ಥರಿಲ್ಲ, ಸ್ವಾರ್ಥಿಗಳಿಲ್ಲ, ಅಧಾರ್ಮಿಕರಿಲ್ಲ, ಸ್ವೈರಾಚಾರಿಗಳಿಲ್ಲ,



ಸ್ವೈರಿಣಿಯರು ಎಲ್ಲಿದ್ದಾರು? ಇದು ನಾನಿರುವ ಜನಪದದ ಸಾಮಾಜಿಕ ಮತ್ತು ವೈಯಕ್ತಿಕ ಸ್ಥಿತಿಗತಿ". ಎಂದು ಕೈಕೇಯನು ಜಾನಪದದ ಪ್ರತಿನಿಧಿ ಅಶ್ವಪತಿ ಋಷಿಗಳಲ್ಲಿ ನಿವೇದಿಸಿಕೊಳ್ಳುತ್ತಾನೆ. "ಆತ್ಮಜ್ಞಾನಿಯಾದ ನೀನು ನೀ ಕಂಡುಕೊಂಡ ಸತ್ಯವನ್ನೇ ನಮಗೆ ನೀಡು" ಎಂದು ಋಷಿಗಳು ಬಿನ್ನವಿಸಿಕೊಳ್ಳುತ್ತಾರೆ. ಇದೊಂದು ಸಾಮಾಜಿಕ ಸಂಸ್ಕೃತಿಯ ಪ್ರಕಟೀಕರಣ. ಸಂಸ್ಕೃತ-ಸಂಸ್ಕೃತಿ ಬಾಳಿನಲ್ಲಿ ವ್ಯಕ್ತವಾಗುವ ವಿಶಿಷ್ಟ ಬಗೆ.

ಗಾಡಿಗಳ ಬೀಡಿನಲ್ಲಿ ಯಾರ ಗೊಡವೆಯಿಲ್ಲದೆ ಆತ್ಮಾರಾಮನಾಗಿ ಕುಳಿತಿರುವ ರೈಕ್ವನ ಹತ್ತಿರ ಜಾನಶ್ರುತಿ ತನ್ನ ಆಸ್ಥಾನಕ್ಕೆ ಬರಲು ಬಿನ್ನವಿಸಿಕೊಳ್ಳುತ್ತಾನೆ. "ನಿನ್ನ ಗೋಧನ, ಗಜಧನ, ವಾಜಿಧನ, ರತ್ನಧನಗಳೆಲ್ಲ ನಿನ್ನಲ್ಲಿರಲಿ". ನನ್ನನ್ನು ನಾನಾಗಿರಲು ಬಿಟ್ಟುಬಿಡು ಎನ್ನುತ್ತಾನೆ ಜ್ಞಾನಧನನಾದ ರೈಕ್ವ. ಇಂಥ ಶಿಷ್ಟತೆಯ ಸಂಸ್ಕೃತಿಸಂದೇಶ ನೀಡುತ್ತದೆ ಸಂಸ್ಕೃತ ವಾಙ್ಮಯಲೋಕ.

"ಸನತ್ಕುಮಾರರೇ, ನಾನು ಕೇವಲ ಮಂತ್ರ ತಿಳಿದಿದ್ದೇನೆ. ಮಂತ್ರದ ಮರ್ಮ ತಿಳಿದಿಲ್ಲ. ಅಗಣಿತ ಜ್ಞಾನ-ವಿಜ್ಞಾನಶಾಖೆಗಳ ವಿದ್ವದ್ವರೇಣ್ಯ ನಾನು. 'ಸೋಹಂ ಭಗವಃ ಶೋಚಾಮಿ'. ನನಗೆ ಶೋಕತರಣದ ಉಪಾಯವನ್ನು ಉಪದೇಶಿಸಿ". ಎಂದು ಔಪನಿಷದ ನಾರದ ತಲೆಬಾಗಿ ನಿವೇದಿಸಿಕೊಳ್ಳುತ್ತಾನೆ.

ಜ್ಞಾನಕುಂಭನಾದ ಋಷಿ ಪಿಪ್ಪಲಾದ ತನ್ನಲ್ಲಿ ಜಿಜ್ಞಾಸುಗಳಾಗಿ ಬಂದ ಋಷಿಗಳಿಗೆ "ತಿಳಿದರೆ ತಿಳಿಸುವೆನು" ಎಂಬ ಮಾಗಿದ ಉತ್ತರ ನೀಡುತ್ತಾನೆ. ಸಾಧನೆ ಹಮ್ಮು-ಬಿಮ್ಮುಗಳ ಬಿಗುಮಾನದ ವಿಜೃಂಭಣೆಯಲ್ಲ ಎಂಬ ಸಕಲ ಕಾಲೋಚಿತ ಸಂದೇಶ ಇಲ್ಲಿದೆ. ಸಂಸ್ಕೃತ ಜೀವನಪಥಿಕರಿಗೆ ಇಂಥ ಪಾಥೇಯವನ್ನು ನೀಡುತ್ತದೆ.

ಸೃಷ್ಟಿಯೆಂಬ ಪಾಠಶಾಲೆಯಲ್ಲಿ ಮಸ್ತಿಷ್ಕಕುಂಭವನ್ನು ತುಂಬಿಕೊಂಡ ಸತ್ಯಕಾಮ ಸ್ವಾಧ್ಯಾಯ-ಪ್ರವಚನಗಳಿಂದ ಋತ-ಸತ್ಯಗಳ ಅರಿವನ್ನರಳಿಸಿಕೊಂಡು, ತನ್ನನ್ನು ಯೋಗಿಯಾಗಿ ರೂಪಿಸಿಕೊಳ್ಳುತ್ತಾ "ಅಹಂ ವೃಕ್ಷಸ್ಯ ರೇರಿವಾ । ------ ಊರ್ಧ್ವಪವಿತ್ರಃ ವಾಜಿನೀವ -------- ನನ್ನ ಉತ್ತಮಾಂಗ ಉತ್ತಮವಾಗಿದೆ, ಸೂರ್ಯಶಕ್ತಿಯ ಆಗರವಾಗಿದೆ, ಭೌತಿಕ ಮತ್ತು ಆತ್ಮಿಕಸಮೃದ್ಧಿಗಳನ್ನು ನಾನು ಸಾಧಿಸಿಕೊಂಡಿದ್ದೇನೆ" ಎಂದು ಸಾರುವ

ಶಿಕ್ಷಾವಲ್ಲಿಯ ತ್ರಿಶಂಕು, ಪಂಚಕೋಶವಿವೇಕದಿಂದ ಅವಚಿಕೊಂಡ ಕವಚವನ್ನು ಮೀರಿ "ಅಹಂ ವಿಶ್ವಂ ಭುವನಮಭ್ಯಭವಾಮ್". "ನಾನು ಆತ್ಮಪ್ರಕಾಶದಿಂದ ವಿಶ್ವವನ್ನೆಲ್ಲಾ ವ್ಯಾಪಿಸಿಕೊಂಡಿದ್ದೇನೆ" ಎಂಬ ಸಾಕ್ಷಾತ್ಕಾರ ಸಂದೇಶವನ್ನು ನೀಡುವ ಭೃಗುವಲ್ಲಿಯ ಭೃಗು – ಇಂಥವರೆಲ್ಲಾ ನಮ್ಮ ಸಂಸ್ಕೃತ–ಸಂಸ್ಕೃತಿಯ ಯುವಪ್ರತಿನಿಧಿಗಳಾಗಿದ್ದಾರೆ.

ತನ್ನಪ್ಪನ ಮಾನಸಿಕ ನೆಮ್ಮದಿಗಾಗಿ ವರಬೇಡುವ ಗುಣವಂತ ಮಗ ನಚಿಕೇತ, "ಕಥಂ ನು ಭಗವಃ ಸ ಆದೇಶೋ ಭವತಿ"?? "ಏಕವಿಜ್ಞಾನದಿಂದ ಸರ್ವವಿಜ್ಞಾನ ಸಾಧ್ಯವಿಲ್ಲ, ನನಗಾರು ಇದನ್ನು ಉಪದೇಶಿಸಿಲ್ಲ" ಎಂಬ ಧಾಟಿಯಲ್ಲಿ ಬೀಗಿ ಬಂದ ಮಹಾಮನಾ, ಅನೂಚಾನಮಾನೀ, ಸ್ತಬ್ಧ ಶ್ವೇತಕೇತುವಿಗೆ "ಏತದಾತ್ಮ್ಯಮಿದಂ ಸರ್ವಂ -------- ತತ್ತ್ವಮಸಿ" ಎಂದು ಏಕಾತ್ಮತೆಯನ್ನು ಉಪದೇಶಿಸಿದ ಮೇಲ್ಪಂಕ್ತಿಯ ತಂದೆ ಆರುಣಿ, ಹಾರಿದ್ರುಮತ– ಯಾಜ್ಞವಲ್ಕ್ಯನಂತಹ ಗುರುಗಳು, ಮೈತ್ರೇಯೀ, ಗಾರ್ಗೀ, ವಿಶ್ವವಾರಾ ಮುಂತಾದ ಬ್ರಹ್ಮವಾದಿನಿಯರು ಸಂಸ್ಕೃತ–ಸಂಸ್ಕೃತಿಯ ವಾಹಕ/ವಾಹಿಕೆಯರಾಗಿದ್ದಾರೆ. ಧನ್ಯ ಸಂಸ್ಕೃತಲೋಕಮಾತಾ!

"ಮಗನೇ, ಚಂದ್ರವಂಶದ ಭೋಗಭಾಗ್ಯ ನಿನಗಾಗಿದೆ. ನೀನೆತ್ತಲೋ ಸರಸ್ವತಿ, ಸಿಂಧೂ, ಗಂಗಾ, ಯಮುನೆಯರ ತಟದಲ್ಲಿ ಸುತ್ತುತ್ತಿರುವೆ. ಕುರುವಂಶದ ಅರಮನೆಯಲ್ಲಿ ವಿಶ್ರಾಂತಿ ತೆಗೆದುಕೋsss" ಎಂದು ರಾಜಮಾತೆ ಸತ್ಯವತಿ ನುಡಿದರೆ "ಈ ಆಸ್ಥಾನ ನನ್ನದಲ್ಲ. ನೂರಾರು ವೇದಶಾಖೆಗಳು ಲುಪ್ತವಾಗುತ್ತಿವೆ, ನಾನು ಅವುಗಳನ್ನು ಸಂಗ್ರಹಿಸುತ್ತೇನೆ ಮತ್ತು ಶಿಷ್ಯರ ಮೂಲಕ ಕಾಪಾಡುತ್ತೇನೆ" ಎಂದು ಯುಗಸಂಧಿಯ ಕಾಲದಲ್ಲಿ ಐದುಸಾವಿರ ವರ್ಷಗಳ ಹಿಂದೆ ಆರ್ಷಪರಂಪರೆಯನ್ನು ಉಳಿಸಿದ ವೇದವ್ಯಾಸ ಮಹರ್ಷಿಯು ಸಂಸ್ಕೃತ–ಸಂಸ್ಕೃತಿಯ ಪ್ರತಿನಿಧಿಗಳಾಗಿದ್ದಾರೆ.

ಸಮಾಜ ಇಂದಿಗೂ ಸಂಸ್ಕೃತಜ್ಞರಿಂದ ಮತ್ತು ವೇದಜ್ಞರಿಂದ ಇಂಥ ಉದಾತ್ತತೆಯನ್ನೇ ಸದಾ ನಿರೀಕ್ಷಿಸುತ್ತದೆ. ೧೯, ೨೦ನೇ ಶತಮಾನದ ಕರ್ನಾಟಕದ ಇತಿಹಾಸವನ್ನು ಸಮೀಕ್ಷಿಸಿದರೆ ಗ್ರಾಮವಾಸಿಗಳಾಗಿದ್ದು, ತಮ್ಮ ವೇದಶಾಖೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ನೂತನ ತಲೆಮಾರನ್ನು ಸೃಷ್ಟಿಸಿದ



ವಿದ್ವಾಂಸರು ನಮಗೆ ವ್ಯಾಸಪರಂಪರೆಯ ವಾರಸುದಾರರಾಗಿ ಕಾಣುತ್ತಾರೆ. ಹೈದರಾಬಾದ್ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಶಾಸ್ತ್ರಜ್ಞರನ್ನು, ವೇದಜ್ಞರನ್ನು, ಆಶುಕವಿಗಳನ್ನು ನಾವು ಕಾಣಬಹುದಾಗಿದೆ. ಉತ್ತರಕನ್ನಡ ಮತ್ತು ಉತ್ತರಕರ್ನಾಟಕದ ಜಿಲ್ಲೆಗಳಲ್ಲಿ ಜಿಲ್ಲಾವಾರು, ತಾಲೂಕುವಾರು ಸಮೀಕ್ಷೆ ನಡೆಸಿದರೆ ವ್ಯಾಸಪರಂಪರೆಯ ಇಂಥ ವಾರಸುದಾರರು ಗ್ರಾಮ–ಗ್ರಾಮಗಳಲ್ಲಿ ಸಿಗುತ್ತಾರೆ. ಮೈಸೂರು ಅರಸರ ಸಂಸ್ಕೃತ ಅಭಿಮಾನವಂತೂ ದಕ್ಷಿಣಕರ್ನಾಟಕದ ಅಗಣಿತ ವಿದ್ವನ್ಮಣಿಗಳನ್ನು ಸೃಷ್ಟಿಸಿದೆ. ಹಾಗೆಯೇ ವಿವಿಧ ಸಂಪ್ರದಾಯಗಳ ಮಠ–ಮಂದಿರಗಳ ಆಶ್ರಯದಲ್ಲೂ ವ್ಯಾಸಪರಂಪರೆಯ ವಾರಸುದಾರಿಕೆ ಮುಂದುವರೆದಿದೆ. ೨೧ನೆಯ ಈ ಶತಾಬ್ದದಲ್ಲೂ ಸಂಸ್ಕೃತವಿದರಿಂದ ಇಂಥ ಹಿರಿಮೆ–ಗರಿಮೆಗಳನ್ನು ಸಮಾಜ ನಿರೀಕ್ಷಿಸುತ್ತಿದೆ. ಕರ್ನಾಟಕ ಭಾರತಕ್ಕೆ ಮತ್ತು ಸಾಗರೋತ್ತರ ರಾಷ್ಟ್ರಗಳಿಗೆ ಇಂಥ ಸಾಂಸ್ಕೃತಿಕ ರಾಯಭಾರಿಗಳನ್ನು ನೀಡುವ ಹೊಣೆ ಹೊರಬೇಕಾಗಿದೆ. ಕರ್ನಾಟಕ ಸಂಸ್ಕೃತವಿಶ್ವವಿದ್ಯಾಲಯ ಅದಕ್ಕೆ ಸಜ್ಜುಗೊಳ್ಳಲೆಂದು ನಾನು ಆಶಿಸುತ್ತೇನೆ.

**ಸಂಸ್ಕೃತವೇ ವಿಶ್ವವಿದ್ಯೆ**

"ಅಧ್ಯಾತ್ಮವಿದ್ಯಾ ವಿದ್ಯಾನಾವ್" ಎಂಬ ಗೀತಾವಚನದಂತೆ ಗಡಿಬಿಡಿಯಿಂದ ಬಿಡುಗಡೆ ಮಾಡುವ ಆತ್ಮವಿದ್ಯೆಯೇ ನಿಜವಾದ ವಿದ್ಯೆ. ಆಧುನಿಕತೆ ಎಂಬ ಹೆಸರಿನಲ್ಲಿ ಅಹಿತಕರ ಸ್ಪರ್ಧೆ ಹೆಚ್ಚಾಗಿ ಅಪಾಯಕರ ಉಪಾಯದಿಂದಲಾದರೂ ಸಂಪತ್ತನ್ನು ಶೇಖರಿಸಿಕೊಳ್ಳಬೇಕೆನ್ನುವ ಮಾನಸಿಕತೆ ಮಿಂಚಿನ ವೇಗದಲ್ಲಿ ಸಕಲ ಕ್ಷೇತ್ರಗಳಲ್ಲೂ ಹರಡುತ್ತಿದೆ. ಸಂಸ್ಕೃತವಿದರು ತಮ್ಮ ಜೀವನದ ಮೇಲ್ಪಂಕ್ತಿಯಿಂದ ಪ್ರೇಯಸ್ಸು–ಶ್ರೇಯಸ್ಸುಗಳ ಸಂತುಲಿತಸ್ಥಿತಿಯನ್ನು ಸಮಾಜದಲ್ಲಿ ತರಬೇಕಾಗಿದೆ. ಪ್ರೇಯಸ್ಸು ಮತ್ತು ಶ್ರೇಯಸ್ಸು ಎಂಬ ಎರಡೂ ಮಾರ್ಗಗಳು ಸಂಸ್ಕೃತ–ಸಂಸ್ಕೃತಿಗೆ ಸಮ್ಮತವಾದವು. ಪರಲೋಕವಾದ ಮತ್ತು ಪಲಾಯನವಾದಗಳು ಋಷಿಸಂಸ್ಕೃತಿಗೆ ಒಪ್ಪುವ ಚರ್ಯೆಗಳಲ್ಲ. "ಜೀವೇಮ ಶರದಶ್ಶತಮ್" ಎಂಬುದೇ ಋಷಿಗಳ ಮಾತು. ಆದರೆ ವೇದ ಮಾರಾಟ ಮಾಡುವ, ಜ್ಞಾನ ಮಾರಾಟಮಾಡುವ, ರಾಜಸೇವಾಧುರಂಧರತ್ವದ ರೀತಿ ಸಂಸ್ಕೃತ–ಸಂಸ್ಕೃತಿಗೆ ಒಪ್ಪುವ ಮಾತಲ್ಲ. ಸಿಂಹಾಸನಾರೂಢರನ್ನು

ಹಾಡಿಹೊಗಳುವಲ್ಲಿ ವಿದ್ವತ್ತೆಯನ್ನು ಮೆರೆಯುವ ಮಧ್ಯಯುಗೀನ ವಿದ್ವನ್ಮಾನಸಿಕತೆ ಪ್ರಜಾಪ್ರಭುತ್ವದ ಇಂದಿನ ಮೌಲ್ಯಕ್ಕೆ ಒಪ್ಪುವಂತಹದ್ದಲ್ಲ, ಭಾರತೀಯ ಆರ್ಷಪರಂಪರೆಗೂ ಒಪ್ಪುವ ನಡತೆಯಲ್ಲ. ಶಿಷ್ಟಾಚಾರದ ಪರಿಧಿಗೆ ಒಪ್ಪದ ಪ್ರದರ್ಶನಾತ್ಮಕ ಪೌರೋಹಿತ್ಯ, ಸಿದ್ಧಿಯಿಲ್ಲದೆ ಪ್ರಸಿದ್ಧಿ ಪಡೆಯುವ ಪ್ರದರ್ಶನಾತ್ಮಕತೆ, ಮತ–ಪಂಥೀಯ ಸಣ್ಣತನ, ಮುಂತಾದವು ಸಂಸ್ಕೃತದ ದಾರ್ಶನಿಕ ಸಂಸ್ಕೃತಿಗೆ ತಗುಲಿದ ಕಳಂಕಗಳೇ ಆಗಿವೆ. ವಿದ್ವತ್ತೆ, ನೀತಿಮತ್ತೆ ಮತ್ತು ಕ್ಷಮತೆಗೆ ಹೆಸರಾದ ಸಂಸ್ಕೃತವಿದ್ವತ್ಪರಂಪರೆ ಇಂದಿನ ಈ ಸಂಧಿಕಾಲದಲ್ಲೂ ತನ್ನ ಹಿರಿತನವನ್ನು ಉಳಿಸಿಕೊಳ್ಳಲೇಬೇಕಾಗಿದೆ. ಅದಕ್ಕೊಂದು ಸುಂದರ ವೇದಿಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವಾಗಬೇಕು.

**ಜೀವನಧಾರೆಯ ಸೆಲೆಯಾಗಿ ಸಂಸ್ಕೃತ**

**ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾದಿಕರ್ಮ ಚ ।**
**ವೇದಾಃ ಶಾಸ್ತ್ರಾಣಿ ವಿಜ್ಞಾನಂ ಏತತ್ ಸರ್ವಂ ಜನಾರ್ದನಾತ್ ॥**
**– ವಿಷ್ಣುಸಹಸ್ರನಾಮಸ್ತೋತ್ರ**

**ಚತುರ್ವೇದಾಃ ಪುರಾಣಾನಿ ಸರ್ವೋಪನಿಷದಸ್ತಥಾ ।**
**ರಾಮಾಯಣಂ ಭಾರತಂ ಚ ಗೀತಾಃ ಸದ್ದರ್ಶನಾನಿ ಚ ॥**
**ಜೈನಾಗಮಾಃ ತ್ರಿಪಿಟಕಾಃ ಗುರುಗ್ರಂಥಃ ಸತಾಂ ಗಿರಃ ।**
**ಏಷ ಜ್ಞಾನನಿಧಿಃ ಶ್ರೇಷ್ಠಃ ಶ್ರದ್ಧೇಯೋ ಹೃದಿ ಸರ್ವದಾ ॥**
**– ಪ್ರೊ. ಶ್ರೀಧರ್ ಭಾಸ್ಕರ್ ವರ್ಣೇಕರ್**

"ಸ ಹೋವಾಚ ಋಗ್ವೇದಂ ಭಗವೋಽಧ್ಯೇಮಿ ಯಜುರ್ವೇದಂ ಸಾಮವೇದಮಥರ್ವಣಂ ಚತುರ್ಥಂ ಇತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಂ ಸರ್ಪದೇವಜನ ವಿದ್ಯಾಮೇತದ್ಭಗವೋಽಧ್ಯೇಮಿ॥"

– ಛಾಂದೋಗ್ಯೋಪನಿಷತ್ ೭–೧–೨

ಈ ಮೇಲಿನ ಆಕರಗಳು ಭಾರತದ ಪ್ರಾಚೀನ ಪರಂಪರೆಯ ಜ್ಞಾನ–ವಿಜ್ಞಾನತಂತ್ರಜ್ಞಾನಗಳ ದಿಕ್ಸೂಚಿಗಳು. ಈ ಪಟ್ಟಿಗಳಲ್ಲಿ ಇರುವ ಹೆಸರುಗಳೆಲ್ಲ



ಜೀವನವಿಜ್ಞಾನದ ವಿವಿಧ ಶಾಖೆಗಳು. ಯಶಸ್ವಿ ಬಾಳಿಗೆ ಬೇಕಾದ ಮಂತ್ರ–ಯಂತ್ರ–ತಂತ್ರವಿದ್ಯೆಗಳು. ಇದು ಸಂಸ್ಕೃತದ ಹರವು. ಇಡೀ ಸಂಸ್ಕೃತವಾಙ್ಮಯದ ನಾಲ್ಕರಲ್ಲಿ ಮೂರಂಶಗಳು ಇವೆ. ಉಳಿದ ಒಂದಂಶ ಮಾತ್ರ ಸಾಹಿತ್ಯ, ಚಾಟು–ಚಮತ್ಕಾರ ಇತ್ಯಾದಿ.

ಭಾರತದೇಶದ ಯಾವುದೇ ರಾಜ್ಯದ ಯುವಪದವೀಧರನೊಬ್ಬ ಯಾವುದೇ ಕ್ಷೇತ್ರದಲ್ಲಿ ಪರಿಣತನಾಗಿ ಸಾಗರೋತ್ತರಯಾತ್ರೆ ಮಾಡಿದಾಗ ಸಾಮಾನ್ಯವಾಗಿ ಈ ಕೆಳಗಿನ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ.

೧. **ವಿಜ್ಞಾನಕ್ಕೆ ನಿಮ್ಮ ದೇಶದ ಕೊಡುಗೆ ಏನು?**
೨. **ನಿಮಗೆ ಯೋಗ ಗೊತ್ತೆ?**
೩. **ನೀವು ಭಗವದ್ಗೀತೆಯನ್ನು ಓದಿದ್ದೀರಾ?**
೪. **ಅನೇಕ ದಶಕಗಳಷ್ಟು ಕಾಲ ನಿಮ್ಮ ದೇಶದ ದಂಪತಿಗಳು ಹೇಗೆ ಸಾಮರಸ್ಯದಿಂದ ಬಾಳುತ್ತಾರೆ?**
೫. **ನಿಮ್ಮ ಆಹಾರಪದ್ಧತಿ ತುಂಬಾ ನಿಸರ್ಗಪ್ರೇಮಿಯಾಗಿದೆಯಲ್ಲಾ ಏಕೆ?**

ನಾನೇ ಈ ಎಲ್ಲಾ ಪ್ರಶ್ನೆಗಳನ್ನು ಎದುರಿಸಿದ್ದೇನೆ, ಸಮಯೋಚಿತ ಸೂಕ್ತ ಉತ್ತರಗಳನ್ನು ನಿಮ್ಮಲ್ಲಿ ಅನೇಕರು ನೀಡಿದ್ದೀರಿ. ಸಂಸ್ಕೃತದ ಬಗ್ಗೆ ಅನೇಕ ತಪ್ಪು ಗ್ರಹಿಕೆಗಳು ಸಂಸ್ಕೃತಜ್ಞರಲ್ಲಿವೆ, ಸಂಸ್ಕೃತವನ್ನು ದೂರದಿಂದ ನೋಡುವ ತಜ್ಞರಿಗೆ, ಸಂಶೋಧಕರಿಗೆ, ಸಾಹಿತಿಗಳಿಗಂತೂ ತುಂಬಾ ಇದೆ. ಅನೇಕ ಸಂಸ್ಕೃತಜ್ಞರು ಸಂಸ್ಕೃತವೆಂದರೆ ರಸಿಕಶ್ಲೋಕಗಳು, ಚಾಟುಶ್ಲೋಕಗಳು, ಎಂದು ಭಾವಿಸುತ್ತಾ ಚಮತ್ಕಾರವುಳ್ಳ ಗದ್ಯಪದ್ಯನಾಟಕಗಳಲ್ಲಿ ಕಳೆದು ಹೋಗುತ್ತಿದ್ದಾರೆ. ಸಂಸ್ಕೃತವೆಂಬ ಗಂಗೆಯ ಗಂಗೋತ್ರಿಯ ಗಂಗಾಜಲ ಪ್ರಭುಸಮ್ಮಿತವಾದ ವೇದ ಮತ್ತು ಮಿತ್ರಸಮ್ಮಿತವಾದ ಶಿಕ್ಷಾದಿ ವೇದಾಂಗಗಳಲ್ಲಿ ಇದೆ, ಎಂಬುದು ನಮಗೆ ಕೆಲವೊಮ್ಮೆ ಮರೆತು ಹೋಗುತ್ತದೆ. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಭಾರೀ ಶ್ರೀಮಂತಿಕೆ ಕನ್ನಡದಿಂದ ಆರಂಭಿಸಿ ಎಲ್ಲಾ ರಾಜ್ಯಭಾಷೆಗಳಲ್ಲೂ ಇದೆ. ಶಬ್ದಾಲಂಕಾರ ಅರ್ಥಾಲಂಕಾರಗಳ ಮೆರುಗಿನ ಮಹಾವಿಜೃಂಭಣೆ ಭಾರತದೇಶದ ಅಗಣಿತ ಭಾಷೆಗಳಿಗಿವೆ. ಹಾಗೆಯೇ ಯೂರೋಪ್ ಮುಂತಾದ ದೇಶಗಳ ಭಾಷೆಗಳಿಗೂ ಇವೆ. ಇದೇ ಸಂಸ್ಕೃತದ ಹೆಗ್ಗಳಿಕೆ ಎಂದು ಸಂಸ್ಕೃತದವರು ಬೀಗಬೇಕಾಗಿಲ್ಲ. ಪ್ರಜ್ಞಾನ, ವಿಜ್ಞಾನ,

ತಂತ್ರಜ್ಞಾನ, ಪ್ರಕೃತಿಪ್ರೇಮಿ ಜೀವನ ಮತ್ತು ಈ ಕೆಳಗಿನ ವಿಜ್ಞಾನದ ಶಾಖೆಗಳು ಜಗತ್ತಿಗೆ ಸಂಸ್ಕೃತ ಕೊಡುತ್ತಾ ಬಂದ ಕೊಡುಗೆಗಳಾಗಿವೆ.

೧. **ಆತ್ಮವಿಜ್ಞಾನ**
೨. **ಭೌತವಿಜ್ಞಾನ**
೩. **ವಿಕಾಸವಿಜ್ಞಾನ**
೪. **ಪ್ರಮಾಣವಿಜ್ಞಾನ**
೫. **ಜೀವವಿಜ್ಞಾನ**
೬. **ನಿರ್ವಹಣವಿಜ್ಞಾನ**
೭. **ವಾಗ್ವಿಜ್ಞಾನ**
೮. **ಮನೋವಿಜ್ಞಾನ**
೯. **ಪರಿಸರವಿಜ್ಞಾನ**
೧೦. **ಸೂರ್ಯರಶ್ಮಿವಿಜ್ಞಾನ**

ಸೂತ್ರರೂಪದಲ್ಲಿ ಉಲ್ಲೇಖಿಸಬಹುದಾದ ವೇದವಿಜ್ಞಾನದ ಶಾಖೆಗಳಿವು. ಜಗತ್ತಿನ ನೂರಾರು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮಾಡುತ್ತಿರುವವರು ಈ ಎಲ್ಲಾ ವಿಜ್ಞಾನಗಳ ಬಗ್ಗೆ ಪ್ರಬಂಧ ಬರೆಯುವಾಗ ಭಾರತದ ವೇದವೇದಾಂಗಗಳನ್ನು ಜಾಲಾಡುತ್ತಾರೆ. ಪಂಜಾಬ್ ಪ್ರಾಂತದ ಯುವಕನೊಬ್ಬ, ಗುಜರಾತ್ ಪ್ರಾಂತದ ಯುವತಿಯೊಬ್ಬಳು, ತಮಿಳಿನವನೊಬ್ಬ, ಕನ್ನಡಿಗನೊಬ್ಬ – ಯಾರಿಗಾದರೂ ವಿಜ್ಞಾನ–ತಂತ್ರಜ್ಞಾನಕ್ಕೆ ನಿಮ್ಮ ದೇಶದ ಕೊಡುಗೆ ಏನು? ಎಂಬ ಪ್ರಶ್ನೆ ಎದುರಾದಾಗ ಸಂಸ್ಕೃತದಲ್ಲಲ್ಲವೇ ಮೂಲವನ್ನು ಹುಡುಕಬೇಕಾದುದು?? ಇಂದಿನ ಸಂತಪ್ತ ಸಮಾಜಕ್ಕೆ, ವ್ಯಕ್ತಿ–ವ್ಯಕ್ತಿಗಳ ಮಧ್ಯೆ ಬೇಕಾದ ಸಾಮರಸ್ಯಸೂತ್ರವನ್ನು ನಮ್ಮ ಗೃಹ್ಯಸೂತ್ರ ಮತ್ತು ಸಾಧುಕಾವ್ಯಗಳು ನೀಡಬಲ್ಲವು. ಸಂಸ್ಕೃತದ ಅಭಿಜಾತ ಕೃತಿಗಳೆಲ್ಲ ಇಂದಿನ ಯುಗಕ್ಕೆ ತುರ್ತಾಗಿ ಬೇಕಾದ ಆಹಾರ, ವಿಹಾರ, ವ್ಯವಹಾರ, ವಿಚಾರ ಯೋಗಮಾರ್ಗದ ಕೈಪಿಡಿಗಳು ಎಂದು ನಾನು ವಿನಮ್ರವಾಗಿ ಭಾವಿಸುತ್ತೇನೆ.

ಭಾರತೀಯ ದಾರ್ಶನಿಕಪರಂಪರೆ, ಯೋಗಾನುಷ್ಠಾನಪರಂಪರೆ, ತಾಂತ್ರಿಕಸಾಧನೆಯ ಪರಂಪರೆಗಳಲ್ಲಿ ಅತ್ಯಧಿಕ ಸಂಶೋಧನೆ ನಡೆಯುತ್ತಿದ್ದ ಕಾಲದಲ್ಲಿ ಈ ದೇಶದ ವಿಚಾರಮಾಧ್ಯಮವಾಗಿದ್ದದ್ದು ಸಂಸ್ಕೃತವೇ. ಪಾಕವಿಜ್ಞಾನದಿಂದ ಆರಂಭಿಸಿ ಪೀಲುವಿಜ್ಞಾನ(ಅಣುವಿಜ್ಞಾನ)ದ ವರೆಗೆ ಉನ್ನತಸ್ತರದ ಅಧ್ಯಯನ ಈ ನಾಡಿನಲ್ಲಿ ನಡೆಯುತ್ತಿದ್ದಾಗ ಜ್ಞಾನಪ್ರಕಾಶದ ವಾಹಕವಾಗಿದ್ದದ್ದು ಸಂಸ್ಕೃತ. ಯಾವುದೋ ಕಾರಣದಿಂದ, ಸಂಸ್ಕೃತದಿಂದ ದೂರವಿರುವ ಚಿಂತಕರು ಕೂಡ ಈ ಮಾಪನದಂಡದಿಂದ ಸಂಸ್ಕೃತದ ಆಧುನಿಕ ಕಲೌಚಿತ್ಯವನ್ನು ಪುನಃ ಪರಿಶೀಲಿಸಬೇಕೆಂಬ ಪ್ರಾರ್ಥನೆ ನನ್ನದು.



ವಿಶ್ವವೇದಿಕೆಯಲ್ಲಿ ಶತ–ಶತಮಾನಗಳಿಂದ ತಾನು ಗಳಿಸಿಕೊಂಡ ವಿಶ್ವಗುರುತ್ವವನ್ನು ಭಾರತ ಪುನಃ ಪ್ರತಿಷ್ಠಾಪಿಸಬೇಕಾಗಿದೆ. ಭ್ರಷ್ಟಾಚಾರ, ಯುವಕ–ಯುವತಿಯರಲ್ಲಿ ಉಚ್ಛೃಂಖಲತೆ, ಸಾಮಾಜಿಕ, ಧಾರ್ಮಿಕ, ರಾಜಕೀಯ ನೇತೃತ್ವದಲ್ಲಿ ಕಂಡುಬರುವ ಅವಿಶ್ವಸನೀಯತೆಗಳು –ಇಂದಿನ ನಮ್ಮ ಸಮಾಜದ ಪಿಡುಗುಗಳಾಗಿವೆ. ಈ ರೋಗಗಳಿಗೆ ಸಂಸ್ಕೃತ ಚಿಕಿತ್ಸೆ ನೀಡಿದರೆ ಸಂಸ್ಕೃತವು ಕಾಲೋಚಿತವಾಗುತ್ತದೆ. ಆ ಪ್ರಕ್ರಿಯೇ ಇಂದು ಆರಂಭವಾಗಬೇಕಾಗಿದೆ.

ಜನಸಾಮಾನ್ಯನಿಗೆ ಯೋಗದಿಂದ, ವೇದಾಂತದಿಂದ, ವೇದೋಕ್ತ ಪ್ರಕೃತಿಪ್ರೇಮಿ ಜೀವನದಿಂದ, ಯಾಜ್ಞಿಕಚಿಕಿತ್ಸೆಯಿಂದ, ಭಾರತೀಯ ಸಂಗೀತದಿಂದ, ಜಗದ್ವಂದ್ಯವಾದ ಭಾರತೀಯ ಕುಟುಂಬ ಪ್ರಬೋಧದಿಂದ ಬಾಳಿಗೆ ಬುತ್ತಿ ದೊರೆಯುತ್ತದೆ. ವೇದಋಷಿಗಳು ಇದನ್ನು ಆಶ್ರಮಧರ್ಮವೆಂದರು. ಆರ್ನಾಲ್ಡ್ ಟಾಯಿನ್‌ಬಿ ಎಂಬ ಇತಿಹಾಸಜ್ಞ ಜಗತ್ತಿನ ಇಂದಿನ ಓಟಕ್ಕೆ ಭಾರತೀಯ ಅಧ್ಯಾತ್ಮದಿಂದ ತಿರುವನ್ನು (Indian Turn) ನೀಡಿ ಮಾನವಕುಲವನ್ನು ಕಾಪಾಡೋಣ ಎನ್ನುತ್ತಾನೆ. ಈ Indian Turn ಸೂತ್ರಗಳಿರುವುದು ವೇದೋಪನಿಷತ್ತುಗಳಲ್ಲಿ. ಅನಾದಿಕಾಲದಿಂದ ಅಗಣಿತ ಆಕ್ರಮಗಳ ಮಧ್ಯದಲ್ಲಿಯೂ ತಲ–ತಲಾಂತರಕ್ಕೆ ಜ್ಞಾನಸಂವಹನ ಮಾಡಿಕೊಂಡು ಬಂದ ಈ ದೇಶದ ಸಂತರ ಶಿಷ್ಟಾಚಾರದಲ್ಲಿ ಆ ಭಾರತೀಯ ಸ್ಪರ್ಶವಿದೆ.

### ನವೋತ್ಥಾನಕ್ಕೆ ಸಂಸ್ಕೃತದ ನವನೀತ

ಸ್ವಾಮೀ ವಿವೇಕಾನಂದರ ವೇದಾಂತದ ಡಿಂಡಿಮದ ನಾದ ಈ ವರ್ಷ ಜಗತ್ತಿನ ಮೂಲೆ ಮೂಲೆಗೆ ತಲುಪುತ್ತಿದೆ. "ನೃಣಾಂ ಏಕೋ ಗಮ್ಯಸ್ತ್ವಮಸಿ ಪಯಸಾಂ ಅರ್ಣವ ಇವ" ಎಂಬ ಶಿವಮಹಿಮ್ನಸ್ತೋತ್ರದ ಸಾಮರಸ್ಯಸೂತ್ರದಿಂದ ವಿಶ್ವಮಾನವರಾದರವರು. ನದಿಯ ನೀರು ಸಾಗರದಲ್ಲಿ ಏಕಾತ್ಮತೆಯನ್ನು ಪಡೆಯಬೇಕಾಗಿದೆ. ಋಗ್ವೇದದ "ಅಮೃತಸ್ಯ ಪುತ್ರಾಃ" ಎಂಬ ಸಂದೇಶವನ್ನು ಉದ್ಘೋಷಿಸಿ ವಿವೇಕಾನಂದರು ಪಾಶ್ಚಾತ್ಯ ಮನಸ್ಸುಗಳನ್ನು ಗೆದ್ದು ನೂರಾರು ಸಾವಿರಾರು ಜನರನ್ನು ಪೌರಾತ್ಯ ಜೀವನದ ಪದ್ಧತಿಗೆ ಪಕ್ಕಾಗುವಂತೆ ಮಾಡಿದರು. ವಿವೇಕಾನಂದರು ಈ ಯುಗದಲ್ಲಿ ನವೋತ್ಥಾನದ ಹರಿಕಾರರು. ಅವರು ನೀಡಿದ ರಾಜಯೋಗ, ಜ್ಞಾನಯೋಗ,

ಕರ್ಮಯೋಗ ಮತ್ತು ಭಕ್ತಿಯೋಗಗಳು ಆಧುನಿಕ ಮಾನವನ ಮನಸ್ಸಿನ ಉದ್ಧಾರಮಾರ್ಗಗಳು. ಸಂಸ್ಕೃತವಿದ್ವಾಂಸರು, ವೈದಿಕರು, ಆಗಮಿಕರು ಹಾಗಾಗುವ ಮೊದಲು ಜೀವನಯೋಗಿಗಳಾಗಲಿ. ಸಮಾಜ ಇವರಿಗೆ ತಲೆಬಾಗುತ್ತದೆ. ವಂದನೀಯತೆ ಬರುವುದು ಈ ಯುಗದಲ್ಲಿ ನಡೆ–ನುಡಿಗಳ ಸಾಮರಸ್ಯದಿಂದಲೇ. ವಿವೇಕಾನಂದರು ಶಿಕ್ಷಣಕ್ಕೆ ಆಧುನಿಕ ಕಾಲೋಚಿತವಾದ ಕೆಲಸಂದೇಶವನ್ನು ನೀಡಿದ್ದಾರೆ. ಶ್ರದ್ಧೆ, ಬ್ರಹ್ಮಚರ್ಯ, ಗುರುಗೃಹವಾಸ ಎಂಬುವೇ ಆ ಸೂತ್ರಗಳು. ದೇಶದ ಕಾಲಾಬಾಧಿತವಾದ ಪರಂಪರೆಗೆ ನಿಷ್ಠರಾದ ನೂರಾರು ಯುವಕರನ್ನು ನೀಡಿ ಎಂದು ಅವರು ಕರೆ ಕೊಟ್ಟಿದ್ದಾರೆ. ಅಂಥ ಯುವಕರು ಜಗತ್ತಿನ ಮೂಲೆ ಮೂಲೆಗಳಿಂದ ಬರಲಿ. ಮೊದಲು ಭಾರತದಲ್ಲಿ ಅಂಥವರು ನಿರ್ಮಾಣವಾಗಲಿ. ಇಂಥ ಯುವಕರು Engineering, Medical, M.B.A, I.A.S, I.P.S, NET, SLET ಮುಂತಾದ ಮೂಲಗಳ ಮೂಲಕ ಬರಲಿ. ಈ ಎಲ್ಲಕ್ಕಿಂತ ಮೊದಲು ಇಂಥ ಯುವಕರು/ಯುವತಿಯರು ಸಂಸ್ಕೃತಪಾಠಶಾಲೆಗಳ ಮೂಲಕ ಸಂಸ್ಕೃತ, ಯೋಗ, ವೇದ ಮುಂತಾದ ಹೆಸರುಳ್ಳ ವಿಶ್ವವಿದ್ಯಾಲಯದ ಮೂಲಕ ನಿರ್ಮಾಣವಾಗಿ ಬರಲಿ. ಆ ಮೂಲಕ ನೂರೈವತ್ತನೇ ವರ್ಷದ ಸಾರ್ಧೈಕಶತಾಬ್ದ ಆಚರಣೆ ವಿವೇಕಾನಂದರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ.

ಭಾರತೀಯ ಜೀವನದೃಷ್ಟಿಯಲ್ಲಿ ಅರ್ಥ–ಕಾಮಗಳಿಗೆ ಹಿತವಾದ ಸ್ಥಾನಮಾನಗಳಿವೆ. ಅದು ಧರ್ಮ–ಮೋಕ್ಷಗಳ ದಂಡೆಯ ಮಧ್ಯದ ಅನವರುದ್ಧ ಅವಿಚ್ಛಿನ್ನ ಪ್ರವಾಹವಾಗಲಿ. Fritjof Copra ಎಂಬ ವಿಜ್ಞಾನಿ ಪೂರ್ವದೇಶಗಳ ಸಾಂಸ್ಕೃತಿಕ ಪರಂಪರೆಗಳ ಬಗ್ಗೆ ಬರೆದು ನಮ್ಮ ಕಣ್ಣನ್ನು ತೆರೆಸಿದ್ದಾನೆ. ಚೈನಾ, ಜಪಾನ್ ಮುಂತಾದ ಪೌರಾತ್ಯ ರಾಷ್ಟ್ರಗಳಿಂದು ಯೋಗದ ಮೂಲಕ ಸಂಸ್ಕೃತ–ಸಂಸ್ಕೃತಿಯ ಪ್ರಸಾರದ ಬಾಗಿಲುಗಳು ತೆರೆಯಲ್ಪಡುತ್ತಿವೆ. ವ್ಯಾಪಾರ–ವಾಣಿಜ್ಯಗಳ ನಾಗಾಲೋಟದ ಈ ಕಾಲದಲ್ಲಿ ಸಂಸ್ಕೃತಿಯ ಸೆಲೆ ಬತ್ತಿ ಹೋದರೆ ಮಾನವನಿಗೆ ಶಾಂತಿ–ಸಮಾಧಾನಗಳಿರುವುದಿಲ್ಲ. “ಭೂಮೌ ಸ್ಖಲಿತಪಾದಾನಾಂ ಭೂಮಿರೇವಾವಲಂಬನಮ್” ಎಂಬ ಮಾತಿನಂತೆ ಸಂಸ್ಕೃತಿಪ್ರಾಣನಾದ ಮಾನವನಿಗೆ ಶಾಶ್ವತ ಆಶ್ರಯ ಸಂಸ್ಕೃತ–ಸಂಸ್ಕೃತಿ–ಸಂಸ್ಕಾರಗಳೇ.



**ಸಂಸ್ಕೃತದ ನಿಜವಾದ ಪರಿಚಯ**

ನಾವಿಂದು ಅಕ್ಷರಯುಗದಲ್ಲಿದ್ದೇವೆ. ಇದಕ್ಕೆ ಇನ್ನೊಂದು ಹೆಸರು ಪುಸ್ತಕಯುಗ. ಮಸ್ತಕದಲ್ಲಿರುವ ವಿಚಾರವನ್ನು ಪುಸ್ತಕದಲ್ಲಿ ಲಿಪಿಮಾಧ್ಯಮದಲ್ಲಿ ಮುದ್ರಿಸಿ ಸ್ಥಿರೀಕರಿಸುತ್ತೇವೆ. ಈ ವಿಧಾನದಿಂದ ಅಲ್ಪಕಾಲ ಸ್ಥಾಯಿ ಅರ್ಥಾತ್ ಕ್ಷರವಾದದ್ದನ್ನು ಚಿರಸ್ಥಾಯಿ ಅರ್ಥಾತ್ ಅಕ್ಷರವನ್ನಾಗಿಸುತ್ತೇವೆ. ಈ ಸೌಲಭ್ಯದ ಆವಿಷ್ಕಾರವಾದಂದಿನಿಂದ ವಾಙ್ಮಯದ ವಿವಿಧ ಪ್ರಕಾರಗಳು ಆವಿರ್ಭಾವಗೊಂಡಿವೆ.

ಐದು ಸಹಸ್ರವರ್ಷಗಳ ಮಹಾಭಾರತೋತ್ತರ ಕಾಲದ ವಾಙ್ಮಯದ ಇತಿಹಾಸವಿದು. ಸಂಸ್ಕೃತ ವಾಙ್ಮಯದ ಉದಾತ್ತಪ್ರಕಾರಗಳಾದ ವೇದ–ವೇದಾಂಗಗಳು ಈ ಯುಗಕ್ಕಿಂತ ಹಿಂದಿನ ಯುಗದವು. ಆ ಕಾಲವನ್ನು ನಾವು ಶ್ರುತಿಯುಗವೆಂದು ಕರೆಯಬಹುದು. ಆಧುನಿಕಯುಗದ ಪ್ರಸಿದ್ಧ ನುಡಿಕಟ್ಟುಗಳಲ್ಲಿ OUT OF BOX, THINKING ಎಂಬುದು ಈಗ ಬಹಳವಾಗಿ ಬಳಕೆಯಲ್ಲಿದೆ. ಸಂಸ್ಕೃತದವರು ಸ್ವಲ್ಪ ಹಳೆಯ ಜಾಡನ್ನು ಬಿಟ್ಟು ಹೊಸ ದಾಟಿಯಲ್ಲಿ ಚಿಂತಿಸೋಣವಾಗಲಿ.

ಲಿಪಿಯೆಂಬುದೊಂದು ಅಲ್ಪಧಾರಣ ಶಕ್ತಿಯ ಮಸ್ತಿಷ್ಕದ ಆವಶ್ಯಕತೆಯಾಗಿ ವಿಕಾಸಗೊಂಡ ಹೊರ ಪ್ರತೀಕಗಳ ಜೋಡಣೆಯಷ್ಟೆ? ಅದು ರೇಖೋಪರೇಖೆಗಳ ಕಲ್ಪಿತವಿನ್ಯಾಸ ಮಾತ್ರ. ಕಾಲಪ್ರವಾಹದ ಒಂದು ಅಧ್ಯಾಯದಲ್ಲಿ ಇದು ಆವಶ್ಯಕವೆನಿಸಿತು. ಅಂದರೆ ಮಾನವನ ಮಸ್ತಿಷ್ಕ ತನ್ನ ಮೂಲ ಶಕ್ತಿಯನ್ನು ಕಳೆದುಕೊಂಡಿತು. ಅಲ್ಲಿಗೆ ಶ್ರುತಿಯುಗ ಸಮಾಪ್ತಿಗೊಂಡಿತು. ಲಿಪಿಯುಗ ವಿಜೃಂಭಿಸತೊಡಗಿತು. ‘ಯಥಾಲಿಖಿತಪಾಠಕರು’ ಅಧಮ ಪಾಠಕರೆಂದು ನಾವಿಂದು ಕರೆದರೆ ಜನರೆಲ್ಲಾ ನಗುತ್ತಾರೆ. ಆದರೂ ಸಂಸ್ಕೃತದ ಸಂಸ್ಕೃತತ್ವ ಇರುವುದು ಶ್ರುತಿಯುಗದಲ್ಲಿ. ಈ ಅರ್ಥದಲ್ಲಿ ಸಂಸ್ಕೃತಜ್ಞನಾದವನು ನಾದಾನುಸಂಧಾನ ಯೋಗಿಯಾಗಿರಬಲ್ಲ ಅಥವಾ ವೇದಾವಿಷ್ಕರ್ತಾ ಋಷಿಯಾಗಿರಬಲ್ಲ. ಕಂಪ್ಯೂಟರ್‌ನ ಈ ಲಿಪಿಯುಗದಲ್ಲೂ OUT OF BOX ನಾವು ಈ ಸತ್ಯವನ್ನು ಸ್ಮರಿಸಿಕೊಳ್ಳೋಣ. ಇದೇ ಸಂಸ್ಕೃತದ ನಿಜವಾದ ಪರಿಚಯವೆಂಬ ಸತ್ಯದ ಮುಖವನ್ನು ಸಮೀಕ್ಷಿಸೋಣ. ಮಹಾಭಾರತೋತ್ತರ

ಐದುಸಹಸ್ರಗಳ ಇತಿಹಾಸ ಸಂಸ್ಕೃತವಾಙ್ಮಯದ ವಿಕಾಸಮಾರ್ಗದಲ್ಲಿ ಇದು ಸಣ್ಣ ಅಧ್ಯಾಯ ಮಾತ್ರ.

ನಾವಿಂದು ಬಹುದೂರ ಸಾಗಿಬಂದಿದ್ದೇವೆ. ರಿಗ್ ಬ್ರಿಕ್ಸ್ ಎಂಬ ಕಂಪ್ಯೂಟರ್ ತಜ್ಞನು ಸಂಸ್ಕೃತಭಾಷೆಯ ಸಂಗಣಕ ನಿಷ್ಕೃಷ್ಟತೆಯನ್ನು ಪರಿಲಕ್ಷಿಸಿ ಕಂಪ್ಯೂಟರಿನ MISSION TRANSLATIONಗಾಗಿ ಹೇಳಿ ಮಾಡಿಸಿದ ಭಾಷೆಯೆಂದು ಉದ್ಗರಿಸಿದ್ದಾನೆ. ಅಲ್ಲಿಂದ ಮುಂದೆ ನಡೆದ ಅನೇಕ ಕಾರ್ಯಾಗಾರದಲ್ಲಿ ಈ ದಿಕ್ಕಿನಲ್ಲಿ ಯತ್ನ ಸಾಗಿ ಬಂದಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಈ ದಿಕ್ಕಿನಲ್ಲಿ ಮುಂದೆ ದಾಪುಗಾಲಿಕ್ಕಬಹುದು. ಕರ್ನಾಟಕಕ್ಕೆ ಸಂಸ್ಕೃತದ ಕ್ಷೇತ್ರದಲ್ಲಿ ಅನೇಕ ಪೂರ್ವಸಾಧನೆ ಮಾಡಿದ ಇತಿಹಾಸ ಉಂಟು.

೧. **೧೯೧೭ರಲ್ಲಿ ವಾಸಿಷ್ಠಮುನಿ ಶಿಷ್ಯನಾದ ದೈವರಾತನಿಂದ ವೇದಮಂತ್ರಗಳ ಆವಿಷ್ಕಾರಗೊಂಡದ್ದು ಕರ್ನಾಟಕದ ಪಶ್ಚಿಮ ಸಮುದ್ರತೀರದ ಭೂಮಿಯಲ್ಲಿ.**

೨. **ಸಂಸ್ಕೃತಲೋಕಕ್ಕೆ 'ಸುಧರ್ಮಾ' ದಿನಪತ್ರಿಕೆಯನ್ನು ಕೊಟ್ಟಿದ್ದು ಕರ್ನಾಟಕ.**

೩. **ವಿಶಾಲ ಜಗತ್ತಿಗೆ ಸಂಸ್ಕೃತ ಸಂಭಾಷಣೆಯ ಆಂದೋಲನದ ಶ್ರೀಗಣೇಶವಾದದ್ದು ಕರ್ನಾಟಕದಿಂದ.**

ಇಂತೆಲ್ಲಾ ವಿವಿಧ ಐತಿಹಾಸಿಕ ಸಂಸ್ಕೃತಪರಾಕ್ರಮಗಳ ಸರಣಿಗೆ ನೂತನ ಆಯಾಮಗಳು ಜೋಡಿಕೊಳ್ಳಲೆಂದು ಆಶಿಸುತ್ತೇನೆ.

## ಕಲೆತು ಕಲಿಯುವ ಕಾಲವಿದು

ಜೀವವಿಜ್ಞಾನದ ವೈಜ್ಞಾನಿಕಶೋಧನೆ ವಿಶ್ವದ ವಿವಿಧ ಎಡೆಯಲ್ಲಿರುವ ಸಕಲ ಮಾನವರು ಒಂದೇ ಜೀವಕೋಶ ಮೂಲದಿಂದ ಉದ್ಭವಿಸಿ ಬಂದಿರುವ ಸತ್ಯವನ್ನು ಹೊರಗೆಡವುತ್ತಿದೆ. ಪ್ರಾಚ್ಯ ಉತ್ಖನನಶಾಸ್ತ್ರದ ಮೂಲದಿಂದ ತಿಳಿದು ಬರುವಂತೆ ಗಂಗಾ, ಯಮುನಾ, ಸರಸ್ವತಿ ನದಿಗಳ 'ಸಪ್ತಸಿಂಧು'ಪ್ರದೇಶವೇ ಪ್ರಾಚೀನ ಮಾನವನ ಮೂಲವೆಂಬ ಸತ್ಯ ದಿನದಿನಕ್ಕೂ ನಿಚ್ಚಳವಾಗುತ್ತಿದೆ. ಭಾಷಾವಿಜ್ಞಾನದ ಸಂಶೋಧನೆಯ ಪ್ರಕಾರ ಅತ್ಯುಚ್ಚ ಮಸ್ತಿಷ್ಕದ ಮೂಲಮಾನವನ ಋಷಿಯ ಆಡುವ ಮಾತು, ವಿಚಾರ ಮಾಧ್ಯಮವೆಲ್ಲಾ ಸಂಸ್ಕೃತವೇ ಆಗಿತ್ತೆಂಬ ಸತ್ಯ ಪ್ರಮಾಣ ಸಿದ್ಧವಾಗುತ್ತಿದೆ. ಗಾಥಿಕ್, ಜರ್ಮನ್ ಮುಂತಾದ ಭಾಷೆಗಳಲ್ಲಿ ಸಂಸ್ಕೃತ ಸಾಮ್ಯವಿರುವುದು ವಿದ್ವಾಂಸರಿಗೆ



ಸುವಿದಿತವಾಗಿದೆ. ಹಿಮಗಿರಿಯ ಗಿರಿಕಂದರಗಳ ಜನಪದ ಭಾಷೆಗಳಲ್ಲಿ ಸಂಸ್ಕೃತದ ಸ್ಪಷ್ಟ ಪಡಿಯಚ್ಚು ಕಾಣಸಿಕ್ಕಿದೆ. ಇಷ್ಟೆಲ್ಲಾ ಭವ್ಯ ಪರಂಪರೆಯುಳ್ಳ ಸಂಸ್ಕೃತವನ್ನು ನಾವು ಮನೆ-ಮನೆಗೆ ಮನ-ಮನಕ್ಕೆ ಮುಟ್ಟಿಸಬೇಕಾಗಿದೆ. ಭರತಮುನಿಯ ಮಾತಿನಂತೆ ಜನಬಳಸುವ ಭಾಷೆಯಲ್ಲಿ ಭಾಷೆ, ಆರ್ಯಭಾಷೆ, ಅತಿಭಾಷೆ ಮುಂತಾದ ಸ್ತರಗಳಿವೆ.

**ಅತಿಭಾಷಾ ತು ದೇವಾನಾಂ ಆರ್ಯಭಾಷಾ ತು ಭೂಭುಜಾಮ್ ।**
**ಸಂಸ್ಕಾರಗುಣಸಂಯುಕ್ತಾ ಸಮ್ಯಕ್-ನ್ಯಾಯಪ್ರತಿಷ್ಠಿತಾ ॥**

**- ಭರತನಾಟ್ಯಶಾಸ್ತ್ರ ೧೮.೨೭**

ಎಂಬಂತೆ ಭಾಷಾಮುಖದಿಂದ, ಸಂಸ್ಕಾರಮುಖದಿಂದ ಮತ್ತು ಅತಿಭಾಷಾಮುಖದಿಂದ ಸಂಸ್ಕೃತವನ್ನು ಲೋಕಕ್ಕೆ ನಾವು ಮುಟ್ಟಿಸಬೇಕಾಗಿದೆ. ಭಾಷೆಯೆಂಬುದೊಂದು ವಿಚಾರ-ಭಾವನೆಗಳ ಆದಾನ-ಪ್ರದಾನಗಳ ಸೇತುವೆ. ಸಂಸ್ಕೃತದ ಈ ಮುಖವನ್ನು ನಾವಿಂದು ಪುನರುಜ್ಜೀವನಗೊಳಿಸಬೇಕಾಗಿದೆ. ಸಂಸ್ಕೃತ ಮಾಧ್ಯಮದಲ್ಲಿ ಪಾಠ, ಸರಳ ಸಂಸ್ಕೃತ ಪ್ರಚಾರಕ್ಕಾಗಿ ಆಂದೋಲನ, ಅದಕ್ಕೆ ಪೂರಕವಾಗಿ ಆಡಿಯೋ, ವೀಡಿಯೋ ಮುಂತಾದ ಆಧುನಿಕ ಪ್ರಭಾವೀ ಮಾಧ್ಯಮಗಳ ಬಳಕೆ, ಸಂಸ್ಕೃತ ಮನೆಗಳ, ಸಂಸ್ಕೃತ ಗ್ರಾಮಗಳ, ಹೆಚ್ಚಳಕ್ಕಾಗಿ ಕ್ರಿಯಾಯೋಜನೆ ಇವು ನಡೆಯುತ್ತಿವೆ. ಅಮೇರಿಕಾದಂತಹ ದೇಶದಲ್ಲಿ "ಈ ಮನೆಯಲ್ಲಿ ಸಂಸ್ಕೃತದಲ್ಲಿ ಮಾತನಾಡಿರಿ" ಎಂಬ ಫಲಕ ಗೋಚರಿಸುತ್ತದೆ. ಸಂಸ್ಕೃತಸಂಧ್ಯಾ ಮುಂತಾದ ಯೋಜನೆಗಳು ಸಾಮಾನ್ಯಜನರಿಗೆ ಮುಟ್ಟುತ್ತಿವೆ. ಸಂಸ್ಕೃತಸಂಧ್ಯಾ, ಸಂಸ್ಕೃತಸಂಭಾಷಣೆ, 'ಆಮ್ ಆದ್ಮಿ'ಸ್ತರಕ್ಕೆ ತಲುಪುತ್ತಿವೆ.

ಆರ್ಯಭಾಷೆಯೆಂದರೆ ಒಂದು ಜನಾಂಗದ ಭಾಷೆಯೆಂದರ್ಥವಲ್ಲ. ಭಾಷೆಯ ಮೂಲರೂಪಗಳಾದ ವರ್ಣ, ಸ್ವರ, ಮಾತ್ರೆಗಳು, ಅಂತರ್ಬಾಹ್ಯ ಯತ್ನಗಳು ಒತ್ತಕ್ಷರದ ಉಚ್ಚಾರಣೆಗಳು ಮತ್ತು ಗಾನಮಾಧುರ್ಯಗಳಲ್ಲಿ ಶ್ರೇಷ್ಠ ಪರಿಷ್ಕಾರವನ್ನು ಸಾಧಿಸಿದ ಭಾಷೆ. ಸಮ್ಯಕ್+ಕೃತ ಸಂಸ್ಕೃತ ಭಾಷೆಯಾಗುತ್ತದೆ. ಸಂಸ್ಕೃತವೆಂಬುದು ಸಾಂಜ್ಞಿಕಪದವಲ್ಲ. ಕ್ರಮಬದ್ಧ ಸಂಸ್ಕಾರ-ಪರಿಷ್ಕಾರಗಳ ವಿಕಾಸಮಾರ್ಗ ಸೂಚಕವಾದ ವಿಶೇಷಣಪದ. ಈ ಹಿನ್ನೆಲೆಯಲ್ಲಿ ಅಭಿಜಾತ ಕನ್ನಡ ಸಂಸ್ಕೃತವೇ ಆಗುತ್ತದೆ. ಫ್ರೆಂಚ್, ಜರ್ಮನ್, ಇಂಗ್ಲೀಷ್‌ಗಳು ಸಂಸ್ಕೃತವೇ ಆಗುತ್ತವೆ.

ಇಪ್ಪತ್ತೊಂದರ ಈ ಶತಾಬ್ದದಲ್ಲಿ ಬಹುದೊಡ್ಡ ಸವಾಲು ಇರುವುದು ಅತಿಭಾಷಾ ಸಂಸ್ಕೃತದ ನಿರ್ವಹಣೆಯಲ್ಲಿ. ಸಂಸ್ಕೃತದ ಸಂಸ್ಕೃತತ್ವ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿರುವುದು ಈ ಸಂಸ್ಕೃತಪ್ರಕಾರಗಳಲ್ಲಿ. ವೇದಮಂತ್ರಗಳು, ಉಪನಿಷದ್ವಾಕ್ಯಗಳು, ವ್ಯಾಸ–ಪಾಣಿನ್ಯಾದಿ ಸೂತ್ರಗಳು, ಕಾರಿಕೆಗಳು, ಭಾಷ್ಯಗಳು, ವಾರ್ತಿಕಗಳು ಮುಂತಾದ ವಾಙ್ಮಯಪ್ರಕಾರಗಳಲ್ಲಿ ನಮಗೆ ಸಂಸ್ಕೃತದ ಅತಿಭಾಷಾಸ್ವರೂಪ ತೋರುತ್ತದೆ. ಸಂಸ್ಕೃತದ ನಿಜವಾದ ಶಕ್ತಿಯಡಗಿರುವುದು ಇವುಗಳಲ್ಲಿ. ಇಂದು ಸಂಶೋಧನೆ ನಡೆಯಬೇಕಾಗಿರುವುದು ಈ ವಾಙ್ಮಯಪ್ರಕಾರಗಳಲ್ಲಿ. ವಿಜ್ಞಾನ–ತಂತ್ರಜ್ಞಾನ, ಪ್ರಜ್ಞಾನ, ಆಜ್ಞಾನ, ಸಂಜ್ಞಾನಗಳೆಲ್ಲಾ ಹುದುಗಿರುವುದು ಈ ವಾಙ್ಮಯಪ್ರಕಾರಗಳಲ್ಲಿ. ಇವುಗಳಲ್ಲಿ ಕೃಷಿ ಮಾಡುವ ಪಾಠಕರು ಮತ್ತು ಸಂಶೋಧಕರು ಇಡೀ ರಾಷ್ಟ್ರಾದ್ಯಂತ ದಯನೀಯ ರೀತಿಯಲ್ಲಿ ಹ್ರಾಸಗೊಳ್ಳುತ್ತಿದ್ದಾರೆ. ಭಾರತದಲ್ಲಿರುವ ಪ್ರಾಚ್ಯವಿದ್ಯಾ ಸಂಶೋಧನಕೇಂದ್ರಗಳಲ್ಲಿ, ಹೊರದೇಶಗಳಲ್ಲಿರುವ, ಹೈಡಲ್ ಬರ್ಗ್, ಎಡಿನ್ ಬರೋ ಮುಂತಾದ ಪ್ರಾಚ್ಯ ಅಧ್ಯಯನ ಕೇಂದ್ರಗಳಲ್ಲಿ ನಮಗಿಂದು ಅತಿಭಾಷಾ ಸಂಸ್ಕೃತ ಪ್ರಕಾರದ ವಿದ್ವತ್ತೆಯ ಉಚ್ಛ್ರಾಯಸ್ಥಿತಿ ಕಂಡುಬರುತ್ತಿಲ್ಲ. ಸಂಸ್ಕೃತದಲ್ಲಿ ಮಾತನಾಡುವವರು, ಕಾವ್ಯಬರೆಯುವವರು, ಪದವೀಧರ/ಪದವೀಧರೆಯರು, ಶಿಕ್ಷಾ–ಶಾಸ್ತ್ರಿಗಳು, ಪ್ರಥಮ–ತೃತೀಯಭಾಷಾ ಪಾಠಕರು ಒಂದೆಡೆಗೆ ಹೆಚ್ಚಲಿ. ಇಂದಿನ ನಮ್ಮ ಪ್ರಯತ್ನ ಈ ದಿಕ್ಕಿನಲ್ಲಿ ಒಳ್ಳೆಯಫಲವನ್ನು ನೀಡಲಿ.

ಕೆಲವೇ ದಶಕಗಳಲ್ಲಿ ಸಂಸ್ಕೃತಲೋಕದಲ್ಲಿ ಉತ್ತಮಶಾಸ್ತ್ರಜ್ಞರ, ವೇದಜ್ಞರ ಭಯಾನಕ ಅಕಾಲಸ್ಥಿತಿ ಉಂಟಾಗಲಿದೆ. ವೇದಕಲಿತವರು ಕಾಲೋಚಿತ ಪ್ರಯೋಗನಿಷ್ಠರಾಗಿ ಸಂಹಿತಾಪಾಠ, ಜಟಾ, ಘನ, ದಂಡಕಗಳನ್ನು ಮರೆಯುತ್ತಿದ್ದಾರೆ. ವೇದಭಾಷ್ಯದ ಅಧ್ಯಯನವಂತೂ ದೂರವಾಗಿದೆ. ವೇದಾಂತ, ನ್ಯಾಯ, ಮೀಮಾಂಸಾ, ವ್ಯಾಕರಣಗಳಲ್ಲಿ ವಿದ್ವಾನ್, ಆಚಾರ್ಯರುಗಳು ಮಾಮೂಲಿ ಮೇಷ್ಟ್ರುಗಳಾಗಿ ಶಾಸ್ತ್ರವನ್ನು ಮರೆಯುತ್ತಿದ್ದಾರೆ. ಜ್ಯೋತಿಷ್ಯ, ಧರ್ಮಶಾಸ್ತ್ರ, ಶಿಕ್ಷಾ, ಕಲ್ಪ, ನಿರುಕ್ತ, ಛಂದಸ್ಸುಗಳು Part Time ಪೂರಕಕಲಿಕೆಗಳ ಪ್ರಕೋಷ್ಠದೊಳಗೆ ಸೇರುತ್ತಿವೆ. ಯೋಗ, ಆಯುರ್ವೇದ, ಗಂಧರ್ವವೇದಗಳು ಸಂಸ್ಕೃತದ ಮೂಲಗ್ರಂಥಗಳ ಅಧ್ಯಯನ ಪ್ರಣಾಲಿಕೆಯಿಂದ ದೂರಸರಿದು ಅನುವಾದ ಅನುಚರಣೆಯಲ್ಲಿ ಕೃತಕೃತ್ಯಗಳಾಗಿವೆ.



ಸಂಸ್ಕೃತದ ಸ್ಥಿತಿಯನ್ನು ಸುಧಾರಿಸ ಹೊರಡುವ ಆಂದೋಲನಗಳು, ಸಂಸ್ಥೆಗಳು, ಸಂಘಟನೆಗಳು, ವಿಶ್ವವಿದ್ಯಾಲಯಗಳು, ಸಂಶೋಧನಸಂಸ್ಥೆಗಳು ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ. Inter Disciplinary ಅಂತರ್ವಿಷಯ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಬೇಕಾಗಿದೆ. MS.c, M.Com, B.A ಕೋರ್ಸ್‌ಗಳಲ್ಲಿ ವಿವಿಧ ಬಗೆಯ ವಿಷಯಗಳನ್ನು ಕಲಿಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸಂಸ್ಕೃತಮೂಲದಿಂದಲೂ ಆಕರಗಳನ್ನು ಆಲೋಡನ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧನ ಗ್ರಂಥಗಳನ್ನು ಹೊರತರಬೇಕಾಗಿದೆ. ಪ್ರಾಚೀನ ಲಿಪಿಶಾಸ್ತ್ರಗಳನ್ನು ಅಧ್ಯಯನಮಾಡಿ ವಿಜ್ಞಾನ–ವಾಣಿಜ್ಯಾದಿ ವಿಷಯಗಳ ಅಪ್ರಕಟಿತ ತಾಳಪತ್ರಗಳ ಅಧ್ಯಯನ ನಡೆಸಿ ಸಂಸ್ಕೃತದ ಜ್ಞಾನಕಿರಣವನ್ನು ಆಯಾ ಕ್ಷೇತ್ರದಲ್ಲಿ ಹರಡಬೇಕಾಗಿದೆ. ಸಂಗಣಕತಂತ್ರಜ್ಞಾನದ ಬಳಕೆಯಿಂದ ಪ್ರಾಚೀನ ವಿದ್ಯೆಯನ್ನು ಸಂಶೋಧನ ಕಾರ್ಯ ಚುರುಕುಗೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಿತ್ಯ ವೇದಶಾಸ್ತ್ರಪಾಠಕರು ಸಂಸ್ಕೃತಲೋಕಕ್ಕೆ ಬೇಕಾಗಿದ್ದಾರೆ. ಇಂಥ ವಿದ್ವಾಂಸರ ನೆಲೆಗೆ ಅಂಥದೇ ಮನೋವೃತ್ತಿಯ ಸದಾಚಾರಸಂಪನ್ನ ಛಾತ್ರ/ಛಾತ್ರೆಯರು ಸತ್ಕಾರ, ದೀರ್ಘಕಾಲ, ನೈರಂತರ್ಯ ವ್ರತದಿಂದ ತೆರಳಬೇಕು. ವೇದಾಂತ, ನ್ಯಾಯ, ಮೀಮಾಂಸಾ, ವ್ಯಾಕರಣ ಮುಂತಾದ ಶಾಸ್ತ್ರಗಳ ಕಠಿಣ ಉದ್ಗ್ರಂಥಗಳ ಕಲಿಕೆಗಾಗಿ ಉನ್ನತಶಾಸ್ತ್ರಾಧ್ಯಯನದ ಕೇಂದ್ರಗಳು Post-Doctoral Studyಯೆಂಬ ಪರಿಕಲ್ಪನೆಯ ಪ್ರಕಾರ ಅಲ್ಲಲ್ಲಾದರೂ ಮೈತಳೆಯಬೇಕು. ಇದಕ್ಕಾಗಿ ಸಂಸ್ಕೃತದವರೆಲ್ಲ ಒಮ್ಮನಸ್ಸಿನಿಂದ, ಕಲೆತು ವೈರುಧ್ಯ–ವೈಷಮ್ಯಗಳಿಂದ ಹೊರಬಂದು ಋಷಿಪರಂಪರೆಯ ಮಹಾವಟದ ನಿಕಟದಲ್ಲಿ ಭಾವದಿಂದ, ಧ್ಯೇಯದಿಂದ, ಕಾರ್ಯವೈಖರಿಯಿಂದ, ಪರಸ್ಪರವಾಗಿ ಹಂಚಿಕೊಂಡು, ಕೈಕುಲಿಕಿಕೊಂಡು ಕೈತುತ್ತನ್ನು ತಿನ್ನುವ ಕಾಲ ಬರಬೇಕಾಗಿದೆ.

**ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್ ।**
**ದೇವಾ ಭಾಗಂ ಯಥಾ ಪೂರ್ವೇ ಸಂಜಾನಾನಾ ಉಪಾಸತೇ ॥೨॥**

**ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ ಸಹ ಚಿತ್ತಮೇಷಾಮ್ ।**
**ಸಮಾನಂ ಮಂತ್ರಮಭಿಮಂತ್ರಯೇ ವಃ ಸಮಾನೇನ ವೋ ಹವಿಷಾ ಜುಹೋಮಿ ॥೩॥**

**ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ।**
**ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ॥೪॥**

**॥ ಋಗ್ವೇದ – ೧೦/೧೯೧ ॥**

## डा. रामचन्द्र जि. भट्टः कोटेमने

उत्तरकन्नडमण्डलस्य कोटेमनेनामकग्रामे १९४९तमे वर्षे लब्धजन्मा रामचन्द्रभट्टवर्यः आबाल्यात् संस्कृतविद्यायां प्राप्तप्रवेशः अद्वैतवेदान्ते विद्वत्पदवीं समार्जयत् । ततश्च कानिचित् वर्षाणि अद्वैतवेदान्तम् अध्याप्य, बेङ्गलूरु जनपदे जनसेवाविद्याकेन्द्रे विंशतिवर्षाणि संस्कृतमध्यापययन् प्राचार्यः आसीत् । ततश्च द्वादशवर्षाणि वेदविज्ञानगुरुकुलस्य प्राचार्यपदमपि अलञ्चकार । बह्वीषु राष्ट्रियान्ताराष्ट्रिययगोष्ठीषु शोधप्रबन्धं वाचयामास । बेङ्गलूरुनगरस्य चन्नेनहळ्ळीप्रान्ते दक्षिणामूर्तिगिरौ वेदविज्ञानगुरुकुलं प्रतिष्ठाप्य तत्र छात्रान् शास्त्राणि अध्यापयामास । तत्र शोधकेन्द्रमपि भट्टाचार्यस्य मार्गदर्शने प्रवर्तते । बहोः कालात् विवेकानन्द-योगानुसन्धानकेन्द्रस्य सङ्कायप्रमुखः रामचन्द्रभट्टमहोदयः अधुना तस्यैव विश्वविद्यालयस्य कौलपत्ये प्रतिष्ठापितः ।

एतेन मध्यप्रदेशसर्वकारात् दीयमानात् भवभूतिपुरस्कारात्, विद्यावारिधिः इति, तथा स्वर्णवल्लीसंस्थानात् आचार्यप्रवरेति पुणेनगरतः गुरुगौरव इत्यादि गौरवसम्मानानि प्राप्तानि ।